ಐಕ್ಯರಂಗ

(ವಾರ ಪತ್ರಿಕೆ)

ಭಾರತಕಮ್ಯೂನಿಸ್ಟ್‌ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 34 ಆಗಸ್ಟ್ 21, 1983 ಬೆಲೆ 60 ಪೈಸೆ

ಸೆಪ್ಟೆಂಬರ್ ಒಂದು
ವಿಶ್ವ ಶಾಂತಿ ದಿನಾಚರಣೆ - ಯಶಸ್ವಿಗೊಳಿಸಿ

ಇಂದು ಜಗತ್ತಿನ ಮಾನವ ಕೋಟಿ ಎದುರಿಸುತ್ತಿರುವ ಅತ್ಯಂತ ಮಹತ್ವದ ಗಂಭೀರವಾದ ಸಮಸ್ಯೆಯಾವುದೆಂದರೆ ಅಮೇರಿಕನ್ ಸಾಮ್ರಾಜ್ಯ ಶಾಹಿಗಳ ಯುದ್ಧ ಪಿಪಾಸಿ ನೀತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಹೇಗೆ ವಿರೋಧಿಸಬೇಕು, ವಿಶ್ವದಲ್ಲಿ ಶಾಂತಿಯನ್ನು ಹೇಗೆ ಕಾಪಾಡಬೇಕು ಎಂಬುದಾಗಿದೆ.

"ಯುದ್ಧ, ಅಣು ಯುದ್ಧ, ಮಾನವ ಕೋಟಿಯನ್ನೇ ಸರ್ವ-ನಾಶಮಾಡುವ ಯುದ್ಧ, ಇದೇನಮ್ಮ ಗುರಿ, ನಾವೆದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟಿಗೆ ಪರಿಹಾರ ಸಮತಾವಾದಿ ದೇಶಗಳ ನಾಶದ ದಾರಿ" ಎಂದು ಅಮೇರಿಕದ ಅಧ್ಯಕ್ಷ ರೇಗನ್ ಮತ್ತು ಅವನ ಬೆಂಬಲಿಗರು ಚೀರಾಡುತ್ತಿರುವಾಗ, ಎಂದಿಗೂ ಯುದ್ಧ ನಡೆಯಗೊಡಲಾರೆವು, ಅಣು ಯುದ್ಧ ಮಾನವ ಕೋಟಿಯ ಉಳಿವಿಗೆ ಮಾರಕ, ನಮಗೆ ಬೇಕು ವಿಶ್ವಶಾಂತಿ, ನಮಗೆ ಬೇಕು ಸಾಮ್ರಾಜ್ಯಶಾಹಿಗಳ ನಾಶ, ಸಮತಾವಾದದ ವಿಜಯವೆಂದು ದುಡಿಯುವ ಜನತೆ, ಪ್ರಜ್ಞಾವಂತ ನಾಗರೀಕ ಜಗತ್ತಿನಾದ್ಯಂತ ಅಲೆ ಅಲೆಯೋಪಾದಿಯಲ್ಲಿ ಕೂಗೆಬ್ಬಿಸುತ್ತಿದ್ದಾನೆ.

ಇಡೀ ಜಗತ್ತನ್ನೇ ನಾಶ ಮಾಡುವ ಮೂರನೇ ಮಹಾ ಅಣು ಯುದ್ಧ ಬೇಕೋ? ಅಥವಾ ಶಾಂತಿ ಸಮಾಜವಾದ ಬೇಕೋ?

ಯುದ್ಧ ಬೇಡ, ಶಾಂತಿ ಬೇಕೆಂದು ಬಲವಾದ ಜನಾಭಿಪ್ರಾಯವನ್ನು ಜಗತ್ತಿನಾದ್ಯಂತ ಹುಟ್ಟಿಸಬೇಕೆಂಬ ಉದ್ದೇಶದಿಂದಲೇ ಕಾರ್ಮಿಕ ಸಂಘಗಳ ವಿಶ್ವ ಒಕ್ಕೂಟ (ಡಬ್ಲ್ಯೂ.ಎಫ್.ಟಿ.ಯು.) ಸೆಪ್ಟೆಂಬರ್ ಒಂದನ್ನು ಯುದ್ಧ ವಿರೋಧ ವಿಶ್ವಶಾಂತಿ ದಿನವನ್ನಾಗಿ ಆಚರಿಸಲು ಹೋದ ವರ್ಷ ಕರೆ ಕೊಟ್ಟಿತ್ತು. ಯುದ್ಧದ ಅಪಾಯದ ಕುರಿತು ಜನ ಜಾಗೃತಿಯನ್ನುಂಟು ಮಾಡುವ ಉದ್ದೇಶದಿಂದ ಹೋದ ತಿಂಗಳು ಪ್ರಾಗ್‌ನಲ್ಲಿ 'ಶಾಂತಿ ಮತ್ತು ಜೀವನ' ಎಂಬುದಕ್ಕಾಗಿ ವಿಶ್ವ ಒಕ್ಕೂಟ ನಡೆಯಿತು. ಕ್ರಿಶ್ಚಿಯನ್ ಪಾದ್ರಿಗಳು, ಮುಸ್ಲಿಂ ಮುಲ್ಲಾಗಳು, ಹಿಂದೂ ಸ್ವಾಮಿಗಳಲ್ಲದೆ ಶಾಂತಿ ಅಪೇಕ್ಷಿಸುವ 200 ಭಾರತೀಯರು ಈ ಒಕ್ಕೂಟದಲ್ಲಿ ಭಾಗವಹಿಸಿದ್ದರು. ಈ ವರ್ಷವೂ ಸೆಪ್ಟೆಂಬರ ಒಂದರಂದು ಯುದ್ಧ ವಿರೋಧ-ವಿಶ್ವಶಾಂತಿ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಬೇಕೆಂದು ನಿರ್ಣಯ ಕೈಗೊಳ್ಳಲಾಗಿದೆ.

ಈ ಮುಂಬಿನ ಎರಡು ಮಹಾ ಯುದ್ಧಗಳಿಗೂ ಈಗ ನಡೆಯಬಹುದಾದ ಅಣು ಯುದ್ಧಕ್ಕೂ ಅಜಗಜಾಂತರವಿದೆ. ಮೊದಲನೆಯ ಮಹಾ ಯುದ್ಧದಲ್ಲಿ ಅಣು ಶಸ್ತ್ರಗಳಿರಲಿಲ್ಲ. ಕಡಿಮೆ ಹಾನಿ ಸಂಭವವಿತ್ತು. ಹಿಟ್ಲರ್ ಎರಡನೇ ಮಹಾ ಯುದ್ಧ ನಡೆಸಿದಾಗ ಕೊನೆಯಲ್ಲಿ ಹಿರೋಶಿಮಾ-ನಾಗಸಾಕಿಯಲ್ಲಿ ಅಣು ಬಾಂಬು ಒಗೆದ ಪರಿಣಾಮವಾಗಿ ಸೀಮಿತ ಪ್ರದೇಶದ ಜನರ ಮೇಲೆ ಎಂಥ ಅಪಾಯಕಾರಿ ಪರಿಣಾಮ ಉಂಟಾಗಿದೆಂದು ಜಗಜ್ಜಾಹೀರವಾಗಿದೆ. ಅತ್ಯಾಧುನಿಕ ಅಣ್ವಸ್ತ್ರಗಳು ಅಮೇರಿಕ, ರಷ್ಯ, ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ದೇಶಗಳಲ್ಲಿ ತಯಾರಾಗಿ ಎದೆಯುಬ್ಬಿಸಿ ನಿಂತಿರುವಾಗ ಅಪ್ಪಿ ತಪ್ಪಿ ಯಾವ ಮೂಲೆಯಿಂದಾದರೂ ಅಣ್ವಸ್ತ್ರ ಪ್ರಯೋಗಿಸಲ್ಪಟ್ಟಿದ್ದಾದರೆ ಜಗತ್ತಿನ 450 ಕೋಟಿ ಜನತೆ ಸುಟ್ಟು ಬೂದಿಯಾಗುವುದರಲ್ಲಿ ಸಂಶಯವಿಲ್ಲ. ಇಂಥ ಗಂಡಾಂತರವನ್ನು ಮನದಟ್ಟು ಮಾಡಿಕೊಂಡಿರುವುದರಿಂದಲೇ ಮಾರ್ಕ್ಸಿಸ್ಟ್ ಕಮ್ಯುನಿಸ್ಟ್ ಪಾರ್ಟಿ ಪ್ರಾರಂಭದಿಂದಲೂ ಯುದ್ಧವನ್ನು ವಿರೋಧಿಸುತ್ತಲೇ ಬಂದಿದೆ. ಅದರಂತೆಯೇ ಸೋವಿಯತ್ ರಷ್ಯ ಮತ್ತು ಇತರ ಸಮತಾವಾದಿ ದೇಶಗಳು ಕೂಡ ಯುದ್ಧ ವಿರೋಧಿ ವಿಶ್ವ ಶಾಂತಿ ಚಳುವಳಿಯ ಮುಂಚೂಣಿಯಲ್ಲಿವೆ.

1983 ಯುದ್ಧದ ವಿಷಯದಲ್ಲಿ ತೀವ್ರ ಸ್ವರೂಪ ತಾಳಿದೆ. ಏಕೆಂದರೆ ಈ ವರ್ಷದ ಕೊನೆಯೊಳಗಾಗಿ ಅಂದರೆ ಡಿಸೆಂಬರ ತಿಂಗಳಲ್ಲಿ ಅಮೇರಿಕದ ಅಧ್ಯಕ್ಷ ರೇಗನ್ ಯುರೋಪ್ ಖಂಡದಲ್ಲಿ ಅಣ್ವಸ್ತ್ರಗಳನ್ನು ಸ್ಥಾಪಿಸಲು ನಿರ್ಧರಿಸಿದ್ದಾರೆ. ಇಂಗ್ಲೆಂಡ್, ಜರ್ಮನ್ ಸರಕಾರಗಳು ಇದಕ್ಕೆ ಒಪ್ಪಿಗೆ ಕೊಟ್ಟಿವೆ. ರಷ್ಯಾ ದೇಶದ ಮೇಲೆ ನೇರವಾದ ಆಕ್ರಮಣದ ತಯಾರಿ ಇದಾಗಿದೆಂಬುದನ್ನು ತಿಳಿಯಲು ಕಷ್ಟವೇನಿಲ್ಲ. ಜರ್ಮನಿಯ ಭೂಮಿಯಿಂದ ರಷ್ಯಾ ದೇಶದ ಮೇಲೆ ಎರಡನೇ ಸಲ ಯುದ್ಧ ಹೂಡುವ ತಂತ್ರ ಇದು ಎಂದು ಸೋವಿಯತ್ ಯೂನಿಯನ್‌ನ ಅಧ್ಯಕ್ಷರಾದ ಆಂದ್ರೊಪೋವ್ ಆರೋಪಿಸಿದ್ದಾರೆ. ಅಮೇರಿಕದ ಸಾಮ್ರಾಜ್ಯಶಾಹಿಗಳು ಹೇಳುವಂತೆ ಈ ಯುದ್ಧ ಯುರೋಪ ಖಂಡಕ್ಕಷ್ಟೇ ಸೀಮಿತವಾದರೂ ಕೂಡ ಜಗತ್ತಿನಾದ್ಯಂತ ಅದರ ಪರಿಣಾಮವಾಗುತ್ತದೆಂಬುದನ್ನು ಮರೆಯಬಾರದು. ಈ ಸಲ ಯುದ್ಧವಾದರೆ ಹಿರೋಶಿಮಾ-ನಾಗಸಾಕಿಗಿಂತ ಸಾವಿರ ಪಟ್ಟು ಹೆಚ್ಚಿಗೆ ಹಾನಿ ಸಂಭವಿಸುತ್ತದೆ.

ಮಾರ್ಕ್ಸಿಸ್ಟ್-ಲೆನಿನಿಸ್ಟರಾದ ನಮಗೆ ಯುದ್ಧ ವಿರೋಧ ಹೋರಾಟ ಅತ್ಯಂತ ಮಹತ್ವದ್ದಾಗಿದೆ ಇದು ನಾವು ಸಮತಾವಾದಕ್ಕಾಗಿ ನಡೆಸುವ ಹೋರಾಟದ ಒಂದು ಅವಿಭಾಜ್ಯ ಅಂಗ. ಸಾಮ್ರಾಜ್ಯಶಾಹಿ ದೇಶಗಳು ಯುದ್ಧ ತಯಾರಿಗಾಗಿ ಕೋಟ್ಯಾವಧಿ ಹಣ ಖರ್ಚು ಮಾಡುತ್ತಿರುವಾಗ, ತಮ್ಮ ಮಾತೃಭೂಮಿಯ, ಸಮತಾವಾದಿ ಪದ್ಧತಿಯ ರಕ್ಷಣೆಗಾಗಿ ಸಮತಾವಾದಿ ದೇಶಗಳು ಕೂಡ ಬಿಲಿಯ ಗಟ್ಲೆ ಹಣ ಖರ್ಚು ಮಾಡಬೇಕಾಗುತ್ತದೆ. ಆ ರೀತಿ ಮಾಡುವುದು ಅಗತ್ಯ. ಎರಡನೇ ಯುದ್ಧದಲ್ಲಿ ರಷ್ಯಾ ದೇಶ ಹಿಟ್ಲರನನ್ನು ಸೋಲಿಸಿತ್ತು.

ಜಗತ್ತಿನಲ್ಲಿ ಯುದ್ಧದ ಭೀತಿಯೆಂಬುದೇ ಇಲ್ಲದಿದ್ದರೆ, ಈಗ ಯುದ್ಧ ತಯಾರಿಗಾಗಿ ಖರ್ಚು

(8ನೇ ಪುಟ ನೋಡಿ)

ಸಂಪಾದಕೀಯ

ರಾಜ್ಯಪಾಲರ ಹುದ್ದೆ

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕೇಂದ್ರ ರಾಜ್ಯ ಸಂಬಂಧ ಕುರಿತ ವಿಚಾರ ಗೋಷ್ಠಿಯಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ರಾಜ್ಯಪಾಲರು "ಉನ್ನತ ಸ್ಥಾನದಲ್ಲಿರುವ ಕೇಂದ್ರ ಸರಕಾರದ ನೌಕರ" ಎಂದು ಹೇಳಿದುದನ್ನು ಸ್ವಾತಂತ್ರ್ಯ ದಿನಾಚರಣೆ ಸಂಬಂಧ ಭಾಷಣದಲ್ಲಿ ರಾಜ್ಯಪಾಲ ಬ್ಯಾನರ್ಜಿಯವರು ಅಲ್ಲಗಳೆಯುತ್ತಾ ತಾನು ಹಾಗೂ ತಾನಿರುವ ಹುದ್ದೆ ಜನ ಸೇವಕನದಾಗಿದೆ ಎಂದು ಪ್ರತಿಕ್ರಿಯೆ ವ್ಯಕ್ತಪಡಿಸಿರುವರು.

ಈ ಹಿನ್ನೆಲೆಯಲ್ಲಿ ಹೆಗಡೆಯವರ ಹೇಳಿಕೆ ವಿಧಾನ ಸಭೆ ಹಾಗೂ ಪರಿಷತ್ತಿನಲ್ಲಿ ಪ್ರಸ್ತಾಪವಾಗಿ ಆ ಬಗ್ಗೆ ಚರ್ಚೆಗೆ ವೇಳೆ ನಿಗದಿ ಮಾಡಲು ವಿಧಾನ ಸಭಾಧ್ಯಕ್ಷರೂ ಪರಿಷತ್ತಿನ ಸಭಾಪತಿಗಳೂ ಸಮ್ಮತಿಸಿದ್ದಾರೆ. ರಾಜ್ಯಪಾಲರ ಬಗ್ಗೆ ತಾನು ಹಾಗೇ ಹೇಳಿದ್ದು ನಿಜ ಹಾಗೂ ರಾಜ್ಯಪಾಲರ ಹುದ್ದೆ ಯಾವ ಸ್ಥಿತಿಗೆ ಇಳಿದಿದೆ ಎಂಬುದನ್ನು ತಾನು ರುಜುವಾತುಗೊಳಿಸುತ್ತೇನೆ ಎಂದು ಸಾರಿ ಚರ್ಚೆಗೆ ಅವಕಾಶ ಮಾಡಿಕೊಡುವುದನ್ನು ಹೆಗಡೆಯವರು ಸ್ವಾಗತಿಸಿರುವರು.

ಸಂವಿಧಾನಾತ್ಮಕವಾಗಿ ಮತ್ತು ಚುನಾವಣೆಯ ಮೂಲಕ ಅಧಿಕಾರಕ್ಕೆ ಬಂದಿರುವ ರಾಜ್ಯ ಸರ್ಕಾರವನ್ನು ಕೇಂದ್ರ ಸರಕಾರದ ಇಷ್ಟಾನುಸಾರ ರಾಷ್ಟ್ರಾಧ್ಯಕ್ಷರ ಆದೇಶದ ಮೂಲಕ ರಾಜ್ಯಪಾಲರ ಮುಖಾಂತರ ವಜಾ ಮಾಡಲು ಸಾಧ್ಯವಿರುವ ಇಂದಿನ ಸ್ಥಿತಿಯಲ್ಲಿ ರಾಜ್ಯಪಾಲರೆಂದರೆ ಉನ್ನತ ಸ್ಥಾನದಲ್ಲಿರುವ ಕೇಂದ್ರ ಸರಕಾರದ ನೌಕರ ಎಂದು ಹೆಗಡೆಯವರು ಹೇಳಿರುವುದು ಸರಿ. ರಾಜ್ಯಪಾಲರ ನೇಮಕದಿಂದ ಮೊದಲ್ಗೊಂಡು ಅವರ ಸಂಪೂರ್ಣ ನಿಯಂತ್ರಣವು ಕೇಂದ್ರ ಸರಕಾರದ ಕೈಯಲ್ಲಿದೆ. 1959ರಲ್ಲಿ ಕೇರಳದಲ್ಲಿ ಅಧಿಕಾರದಲ್ಲಿದ್ದ ಕಮ್ಯುನಿಸ್ಟ್ ಸರಕಾರವನ್ನು ವಜಾ ಮಾಡಿದುದರಿಂದ ಮೊದಲ್ಗೊಂಡು ಇತ್ತೀಚೆಗೆ ಪಾಂಡಿಚೇರಿಯಲ್ಲಿ ಬಹುಮತ ಬೆಂಬಲವಿದ್ದಾಗಲೂ ಡಿ.ಎಮ್.ಕೆ. ಸರಕಾರವನ್ನು ವಜಾ ಮಾಡಿರುವುದು, ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷಕ್ಕಿಂತ ಬೇರೆ ಪಕ್ಷಗಳು ರಾಜ್ಯಗಳಲ್ಲಿ ಅಧಿಕಾರದಲ್ಲಿರುವಾಗ ರಾಜ್ಯ ಸರಕಾರಗಳು ಮಾಡಿರುವ ಅನೇಕ ಮಸೂದೆಗಳಿಗೆ ರಾಜ್ಯಪಾಲರುಗಳು ಸಹಿ ಮಾಡದಿರುವುದು-ಇವೆಲ್ಲಾ ರಾಜ್ಯಪಾಲರುಗಳು ಕೇಂದ್ರ ಸರಕಾರದ ನೌಕರರಾಗಿ ಕೆಲಸ ನಡೆಸುವುದನ್ನು ಸಾಕಷ್ಟು ಸಾಬೀತು ಗೊಳಿಸಿವೆ.

ರಾಜ್ಯಪಾಲರ ನೇಮಕದಿಂದ ಮೊದಲ್ಗೊಂಡು ರಾಜ್ಯಗಳಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತೆಯನ್ನು ಜಾರಿಗೊಳಿಸುವ ಇಂದಿನ ಪ್ರಜಾ ಪ್ರಭುತ್ವ ವಿರೋಧಿ ಕ್ರಮವನ್ನೂ, ಕೇಂದ್ರದಲ್ಲಿ ಆರ್ಥಿಕ ಹಾಗೂ ರಾಜಕೀಯ ಅಧಿಕಾರಗಳ ಕೇಂದ್ರೀಕರಣವನ್ನೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ವಿರೋಧಿಸುತ್ತಾ ಬಂದಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವಾಗ ಜನತಾ ಪಕ್ಷದ ಸರಕಾರವು ಕೇಂದ್ರ ರಾಜ್ಯಗಳ ಸಂಬಂಧಗಳ ಮರು ಪರಿಶೀಲನೆಗೆ ವಿರೋಧ ವ್ಯಕ್ತಪಡಿಸಿತ್ತಾದರೂ, ಈಗ ಬದಲಾದ ಪರಿಸ್ಥಿತಿಯಲ್ಲಿ ರಾಜ್ಯದ ಜನತಾ ಸರಕಾರವು ಕೇಂದ್ರ ರಾಜ್ಯಗಳ ಸಂಬಂಧದ ಪುನರ್ ವಿಮರ್ಶೆಗೆ ಒತ್ತಾಯಿಸುವುದು ಸ್ವಾಗತಾರ್ಹ. ಹಾಗೆಯೇ ಇದೀಗ ರಾಜ್ಯಪಾಲರ ಹುದ್ದೆಯ ಕುರಿತಾಗಿ ಉದ್ಭವವಾಗಿರುವ ಚರ್ಚೆಯೂ ಸ್ವಾಗತಾರ್ಹ. ಈ ಚರ್ಚೆಯೂ ರಾಷ್ಟ್ರ ಮಟ್ಟದಲ್ಲಿ ಬೆಳೆದು ಬರುವಂತಾಗಿ ಕೇಂದ್ರವು ರಾಜ್ಯಗಳ ಅಧಿಕಾರದ ಮೇಲೆ ನಡೆಸುತ್ತಿರುವ ಆಕ್ರಮಣದ ವಿರುದ್ಧ ಚಳುವಳಿಯಾಗಿ ಮಾರ್ಪಾಡಾಗಲಿ ಎಂದು ನಾವು ಹಾರೈಸುತ್ತೇವೆ.

ಬೆಂಗಳೂರು

ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ, ಧರಣಿ

ದಿನಾಂಕ 17-8-83ರಂದು ಸಿ. ಪಿ. ಐ. (ಎಂ)ನ ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ವಿರುದ್ಧ ಪ್ರತಿಭಟಿಸಿ ನಗರದ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ನಡೆಸಲಾಯಿತು.

ನಾಗರೀಕರಿಗೆ ದಿನ ನಿತ್ಯ ಉಪಯೋಗವಾಗುವ ಅಕ್ಕಿ, ಸೀಮೆ ಎಣ್ಣೆ ಮತ್ತಿತರ ಅಗತ್ಯ ವಸ್ತುಗಳನ್ನು ಸಮರ್ಪಕವಾಗಿ ಸರಬರಾಜು ಮಾಡಬೇಕು ಮತ್ತು ಪ್ರತಿ ಕಾರ್ಡುದಾರನಿಗೆ ತಿಂಗಳಿಗೆ 30 ಕೆ. ಜಿ. ಅಕ್ಕಿ ನೀಡುವ, ಮತ್ತಿತರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿಯೊಂದನ್ನು ಅರ್ಪಿಸಲಾಯಿತು.

ಮಹಿಳೆಯರೂ ಸೇರಿದಂತೆ ನೂರಾರು ಜನರಿದ್ದ ಈ ಧರಣಿಯ ನೇತೃತ್ವವನ್ನು ಸಿ. ಪಿ. ಐ. (ಎಂ)ನ ಜಿಲ್ಲಾ ಕಾರ್ಯದರ್ಶಿ ಹಾಗೂ ವಿಧಾನ ಸಭಾ ಸದಸ್ಯರಾದ ಕಾ। ಸೂರ್ಯನಾರಾಯಣರಾವ್‌ರವರು ವಹಿಸಿದ್ದರು.

ಪ್ರದರ್ಶನಕಾರರನ್ನು ಉದ್ದೇಶಿಸಿ ಕಾ। ಎನ್. ಕೆ. ಉಪಾಧ್ಯಾಯ, ಕಾ॥ ಆರ್. ಶ್ರೀನಿವಾಸ್, ಕಾ॥ ರಾಜಗೋಪಾಲ್, ಕಾ॥ ಶಾಂತ ಕುಮಾರಿ, ಕಾ॥ ಶಾಮಣ್ಣ ರೆಡ್ಡಿ ಮತ್ತು ಕಾ॥ ಸೂರ್ಯನಾರಾಯಣ ರಾವ್‌ರವರು ಮಾತನಾಡಿದರು. ರಾಜ್ಯಕ್ಕೆ ಅಕ್ಕಿ ಒದಗಿಸುವಲ್ಲಿ ಕೇಂದ್ರ ಸರ್ಕಾರ ತಾಳುತ್ತಿರುವ ಮಲತಾಯಿ ಧೋರಣೆಯನ್ನು ಖಂಡಿಸಲಾಯಿತು. ಬೆಳಗ್ಗೆ 11 ಗಂಟೆಗೆ ಆರಂಭವಾದ ಧರಣಿ, ಮಧ್ಯಾಹ್ನ 3 ಗಂಟೆಗೆ ಕೊನೆಗೊಂಡಿತು.

ಕರ್ನಾಟಕ ರಾಜ್ಯದ ಶಿಕ್ಷಣ ಮಸೂದೆ

- ಎನ್. ಕೆ. ಉಪಾಧ್ಯಾಯ

ಕರ್ನಾಟಕದ ಜನತಾ ಸರಕಾರ ಒಂದು ಸಮಗ್ರ ಶಿಕ್ಷಣ ಮಸೂದೆಯನ್ನು ರಾಜ್ಯದ ಜನತೆಗೆ ಅರ್ಪಿಸುವುದಾಗಿ ಹೋದ ವಿಧಾನ ಸಭೆಯಲ್ಲಿ ಘೋಷಿಸಿತ್ತು. ಆಗಸ್ಟ 12ರಂದು, ಕರ್ನಾಟಕ ಶಿಕ್ಷಣ ಮಸೂದೆ, 1983. ವಿಧಾನ ಸಭೆಯಲ್ಲಿ ಮಂಡಿಸಿ ಅದರ ಕುರಿತು ಸಂಪೂರ್ಣ ವಿಚಾರ ವಿನಿಮಯ ಮಾಡಿ ಸೂಚನೆಗಳೊಡನೆ ಪುನಃ ವಿಧಾನಸಭೆಯಲ್ಲಿ ಮಂಡಿಸಲು 20 ಜನರ ಸಿಲೆಕ್ಟ್ ಕಮಿಟಿಗೆ ಅರ್ಪಿಸಲಾಯಿತು.

ಒಟ್ಟಾರೆ ನೋಡಿದರೆ ಈ ಮಸೂದೆಯಲ್ಲಿ ಕ್ರಾಂತಿಕಾರಿ ಅಂಶಗಳಾಗಲೀ, ಶಿಕ್ಷಣರಂಗದಲ್ಲಿ ಮೂಲಭೂತ ಬದಲಾವಣೆಯನ್ನುಂಟುಮಾಡುವ, ಶಿಕ್ಷಣಕ್ಕೆ ಹೊಸ ತಿರುವುಕೊಡುವ ಯಾವ ಲಕ್ಷಣಗಳೂ ಕಂಡುಬರುತ್ತಿಲ್ಲ.

ನಮ್ಮ ರಾಜ್ಯದಲ್ಲಿರುವ ಶೈಕ್ಷಣಿಕ ಸಂಸ್ಥೆಗಳ ಉತ್ತಮ ಸಂಘಟನೆ ಅಭಿವೃದ್ಧಿ, ಶಿಸ್ತು ಮತ್ತು ಹಿಡಿತ ಒದಗಿಸುವ ಸಲುವಾಗಿ ಮಸೂದೆ ತಯಾರಿಸಲಾಗಿದೆಯೆಂದು ಹೇಳಲಾಗಿದೆ.

ಶಿಕ್ಷಣ ಸಂಸ್ಥೆಗಳ ಯೋಜಿತ ಅಭಿವೃದ್ಧಿಗಾಗಿ, ಆರೋಗ್ಯಕರವಾದ ವಿದ್ಯಾಭ್ಯಾಸ ಒದಗಿಸುವ ಸಲುವಾಗಿ, ಶಿಕ್ಷಣದ ಮಟ್ಟದಲ್ಲಿ ಸುಧಾರಣೆ ಮತ್ತು ಮೇಲ್ಮಟ್ಟ ಉಳಿಸಿಕೊಳ್ಳಲು, ರಾಜ್ಯದ ಶಿಕ್ಷಣ ಸಂಸ್ಥೆಗಳ ಮೇಲೆ ಸಂಘಟನೆ, ಶಿಸ್ತು ಮತ್ತು ಹಿಡಿತವನ್ನು ಉತ್ತಮಪಡಿಸುವುದು ಅಗತ್ಯವೆಂದೂ ಆದದ್ದರಿಂದಾಗಿ ವಿದ್ಯಾರ್ಥಿಗಳ ಮೇಲೆ ಮಾನಸಿಕ ಹಾಗೂ ಶಾರೀರಿಕ ವಿದ್ಯಾಭ್ಯಾಸವನ್ನು ಸರಿಯಾಗಿ ಬೆಳೆಸಲು, ಶಿಕ್ಷಣದ ಮೂಲಕ ಶಾಸ್ತ್ರೀಯ ಮತ್ತು ಜಾತ್ಯಾತೀತ ದೃಷ್ಟಿಕೋನವನ್ನು ಒದಗಿಸಲು ಸಾಧ್ಯವಾಗುವುದೆಂದು, ಪರಿಗಣಿಸಲಾಗಿದೆಯೆಂದೂ ಮಸೂದೆಯಲ್ಲಿ ಹೇಳಲಾಗಿದೆ.

ಹಿಂದುಳಿದ ವರ್ಗ ಮತ್ತು ಜನಾಂಗದವರಿಗೆ ಶಿಕ್ಷಣ ಒದಗಿಸಲು ಪ್ರತ್ಯೇಕ ಕ್ರಮ ತೆಗೆದುಕೊಳ್ಳಲಾಗುವುದೆಂದು ಮಸೂದೆಯಲ್ಲಿ ನಮೂದಿಸಲಾಗಿದೆ. ಇದರ ಅರ್ಥ ಮಾತ್ರ ಸ್ಪಷ್ಟಪಡಿಸಿಲ್ಲ. ಎಲ್ಲ ಶಿಕ್ಷಣ ಸಂಸ್ಥೆಗಳಿಗೆ, ಯಾವ ರೀತಿ ವಿದ್ಯಾಭ್ಯಾಸ ಒದಗಿಸಬೇಕೆಂದು ಆದೇಶ ನೀಡುವಾಗ, ಅಲ್ಪಮತಸ್ಥರ ಶಿಕ್ಷಣ ಸಂಸ್ಥೆಗಳಿಗೆ ಓದು ಬರಹ ಕಲಿಸುವ ಮಾಧ್ಯಮವನ್ನು ಒದಗಿಸುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಅಂಥ ಸಂಸ್ಥೆಗಳಿಗೂ ನಿರ್ದಿಷ್ಟ ನಿರೂಪಣೆ ಒದಗಿಸುವುದು ಅಗತ್ಯ.

ಶಾಲೆಯಲ್ಲಿ ಕಲಿಸಲು, ಜನಸಂಖ್ಯೆ, ಶಾರೀರಿಕ, ಆರೋಗ್ಯ, ಆಟ, ಸಾಮಾಜಿಕ ಸೇವೆ, ಉತ್ಪಾದನೆ, ನಾಗರಿಕ ತಿಳುವಳಿಕೆ ರಾಷ್ಟ್ರೀಯ ಭಾವೈಕ್ಯ ಮುಂತಾದ ಪಾಠಗಳನ್ನು ಸೂಚಿಸಲಾಗಿದೆ.

ಇಂದಿನ ಕಾಲದಲ್ಲಿ ಈ ವಿಷಯಗಳನ್ನಷ್ಟೇ ಮಕ್ಕಳಿಗೆ ಕಲಿಸಿದರೆ ಮಾತ್ರ ಸಾಲದು. ನಮ್ಮ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ, ಸ್ವತಂತ್ರ ಆಜಾದ್ ಫೌಜ್ ಕಟ್ಟುವಲ್ಲಿ, ನಾವಿಕರ ಬಂಡಾಯದಲ್ಲಿ ರೈತ–ಕಾರ್ಮಿಕರ ಹೋರಾಟಗಳಲ್ಲಿ ಜಾತೀಯ ಸೌಹಾರ್ದತೆಯು ಎಲ್ಲ ಜಾತಿ. ಮತ, ಧರ್ಮಗಳ ಸಂಲಗ್ನತೆಯನ್ನೂ ರಶ್ಯಾ, ಚೀನಾಗಳಲ್ಲಿಯ ಕ್ರಾಂತಿಯ ವಿಷಯಗಳನ್ನೂ, ಶಾಸ್ತ್ರೀಯ ಸಮತಾವಾದ, ಪ್ರಜಾಪ್ರಭುತ್ವ, ನಾಗರಿಕ ಹಕ್ಕು ಮುಂತಾದ ವಿಷಯಗಳನ್ನೂ, ಒಂದನೇ–ಎರಡನೇ ಮಹಾಯುದ್ಧಗಳ ಮುಖ್ಯಾಂಶಗಳನ್ನು ಅದರಿಂದಾಗಿ ಜಗತ್ತಿನ ರಾಜಕೀಯ ನಕಾಶೆಯಲ್ಲಾದ ಬದಲಾವಣೆಗಳ ಬಂಡವಾಳಶಾಹಿ ವ್ಯವಸ್ಥೆಯ ದುಷ್ಪರಿಣಾಮಗಳನ್ನೂ–ಒಳಗೊಂಡ ಅಂದರೆ ವಿದ್ಯಾರ್ಥಿಗಳಿಗೆ ಹೊಸ ದೃಷ್ಟಿಕೋನವನ್ನೊದಗಿಸುವ ಹಾಗೆಯೇ ಮಾಧ್ಯಮಿಕ ಶಿಕ್ಷಣವನ್ನು ಕಲಿತು ಹೊರಬರುವಾಗ ಜೀವನದಲ್ಲಿಯ ಮೌಲ್ಯವನ್ನೂ ಸಮಾಜದಲ್ಲಿ ತನ್ನ ಜವಾಬ್ದಾರಿಯನ್ನೂ ಅರಿತುಕೊಂಡು ಸ್ವತಂತ್ರ ಉದ್ಯೋಗ ನಡೆಸುವ ಅಥವಾ ರಾಜಕೀಯ, ಸಾಮಾಜಿಕ ಕೆಲಸಗಳಲ್ಲಿ ಪರಿಪೂರ್ಣವಾಗಿ ಪಾಲ್ಗೊಳ್ಳುವಂತೆ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುವ ಪಠ್ಯಪುಸ್ತಕಗಳು ಬೇಕು. ಶಿಕ್ಷಣದ ಪಾಠಗಳು ಬೇಕು. ಅದನ್ನೆಲ್ಲ ಕಲಿಸಲು ಹೊಸ ದೃಷ್ಟಿಕೋನದ ಶಿಕ್ಷಕವೃಂದವೂ ಬೇಕು.

ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಶಿಕ್ಷಣವನ್ನು ಒತ್ತಾಯಪೂರ್ವಕವಾಗಿ ಕಲಿಸಲಾಗುವುದೆಂದು ಹೇಳುವ ಸರಕಾರ ಈ ಮಸೂದೆಯ ಮೂಲಕ ಕೆಲವೇ ಪ್ರದೇಶಗಳಲ್ಲಿ ಅದನ್ನು ಕಡ್ಡಾಯಮಾಡಲಾಗುವುದೆಂದು ಹೇಳಿರುವುದು ಸರಿಯಲ್ಲ.

ದೇಶಾದ್ಯಂತ ಕಡ್ಡಾಯ ಶಿಕ್ಷಣ ಒದಗಿಸಲಾಗುವುದೆಂದು ಸಂವಿಧಾನವೇ ಹೇಳುತ್ತಿರುವಾಗ, ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಎಲ್ಲರಿಗೂ ದೊರಕಿಸುವ ಅವಶ್ಯಕತೆಯನ್ನು ಜನತಾ ಪಾರ್ಟಿ ಒಪ್ಪಿಕೊಂಡಿರುವಾಗ, ರಾಜ್ಯ ಸರಕಾರದ ಮರ್ಜಿಗನುಸಾರವಾಗಿ ಸ್ಥಳೀಯ ಸಂಸ್ಥೆಗಳಿಗೆ ಕೇಳಿದಾಗ ಮಾತ್ರ ಅವರು ತಮ್ಮ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣ ಒದಗಿಸುವ ಕುರಿತು ವಿವರವಾದ ಯೋಜನೆ ಒದಗಿಸಬೇಕೆಂದು ಹೇಳಿರುವುದು ಸರಿಯಲ್ಲ. 1983 ರಿಂದಲೇ ಅಥವಾ 1984 ರಿಂದಲೇ ಕರ್ನಾಟಕ ರಾಜ್ಯಾದ್ಯಂತ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಜಾರಿಯಲ್ಲಿ ತರುವ ಘೋಷಣೆಯನ್ನು ಈ ಮಸೂದೆಯಲ್ಲಿ ಸೇರಿಸಬೇಕು. ಅದಕ್ಕೆ ಬೇಕಾದ ವ್ಯವಸ್ಥೆ ಮಾಡುವ ಜವಾಬ್ದಾರಿಯನ್ನು ಕೂಡಲೇ ಸರಕಾರ ವಹಿಸಿಕೊಳ್ಳಬೇಕು ಸ್ಥಳೀಯ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ, ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವ ಯೋಜನೆಯನ್ನು ಒಪ್ಪಿಸಿರುವುದು ಸರಿಯಲ್ಲ. ಈ ಹಿಂದೆ ಸ್ಥಳೀಯ ಸಂಸ್ಥೆಗಳು ನಡೆಸುತ್ತಿದ್ದ ಎಲ್ಲ ಪ್ರಾಥಮಿಕ ಶಾಲೆಗಳನ್ನು ಸರಕಾರವೇ ವಹಿಸಿಕೊಂಡಿರುವಾಗ, ಈಗ ಪ್ರಾಥಮಿಕ. ಶಿಕ್ಷಣವನ್ನು ಕಡ್ಡಾಯಗೊಳಿಸಬೇಕಾಗಿ ಬಂದಿರುವಾಗ ಮತ್ತೆ ನಗರ ಸಭೆಗಳಂತ ಸ್ಥಳೀಯ ಸಂಸ್ಥೆ ಮತ್ತು ವ್ಯಕ್ತಿಗಳಿಗೆ ಈ ಜವಾಬ್ದಾರಿಯನ್ನು ಹೊರಿಸುವುದು ಸರಿಯಲ್ಲ. ಸ್ಥಳೀಯ ಸಂಸ್ಥೆಗಳಿಗಾದರೂ ಕೆಲವು ಮಟ್ಟಿಗೆ ಇದರ ಜವಾಬ್ದಾರಿ ಕೊಡಬಹುದು. ಆದರೆ ಪೂರ್ಣ ಆರ್ಥಿಕ ಸಹಾಯ ಮಾತ್ರ ಅವರಿಗೆ ಒದಗಿಸಬೇಕು: ಹಾಗೆಯೇ ಕಟ್ಟಡಗಳನ್ನೂ ಸರಕಾರವೇ ಕಟ್ಟಿಕೊಡಬೇಕು. ಆದರೆ ವ್ಯಕ್ತಿಗಳಿಗೆ ಮಾತ್ರ ಇಂಥ ಜವಾಬ್ದಾರಿಯನ್ನು ಹೊರಿಸಬಾರದು. ಅದರಿಂದ ಹಣ ಮಾತ್ರ ಪೋಲಾಗುತ್ತದೆ, ಮಕ್ಕಳಿಗೆ ಶಿಕ್ಷಣ ಸಿಗುವುದಿಲ್ಲ.

ಕಡ್ಡಾಯ ಪ್ರಾಥಮಿಕ ಶಿಕ್ಷಣವೆಂದು ಮಂತ್ರ ಪಠಿಸಿದರೆ ಮಾತ್ರ ಆ ಸಮಸ್ಯೆ ಬಗೆಹರಿಯುವುದಿಲ್ಲ. ಈಗಿರುವ ಬಂಡವಳಶಾಹಿ ಸಮಾಜದಲ್ಲಿ ಜನರಿಗೆ ಉಪಜೀವನದ ವ್ಯವಸ್ಥೆ ಇಲ್ಲದಿರುವುದರಿಂದ ಎಳೆ ಮಕ್ಕಳನ್ನು ಶಾಲೆಗೆ ಕಳುಹಿಸಿಕೊಡದೆ, ಜೀವನ ನಿರ್ವಹಣೆಗಾಗಿ ನಾಲ್ಕು ಕಾಸುಗಳಿಸಲು ಪಾಲಕರು ಮಕ್ಕಳನ್ನು ದುಡಿಯಲಿಕ್ಕೆ ಕಳುಹಿಸಿ ಕೊಡುವಂಥ, ಚಹಾದಂಗಡಿ, ತೋಟ, ಕೂಲಿ, ಕೆಲಸಗಳಲ್ಲಿ ದುಡಿಯುತ್ತಿರುವ ದಾರುಣ ದೃಶ್ಯ ನೋಡುತ್ತಿದ್ದೇವೆ. ಸರಕಾರ ಕಾನೂನು ಮಾಡಿದಕೂಡಲೇ ಈ ಸಮಸ್ಯೆ ಬಗೆಹರಿಯಲಾರದು. ಸಂಘ-ಸಂಸ್ಥೆಗಳ, ಕಾರ್ಮಿಕ ಯೂನಿಯನ್‌ಗಳ, ರೈತ ಸಂಘಗಳ ಸಹಾಯ ಪಡೆದರೆ ಮಾತ್ರ ಈ ಸಮಸ್ಯೆಗೆ ಸ್ವಲ್ಪ ಪರಿಹಾರ ಕಾಣಬಹುದು. ಆದ್ದರಿಂದ ಶಿಕ್ಷಣ ಮಸೂದೆ ಇಂಥ ಗಂಭೀರ ಸಮಸ್ಯೆಗೆ ಎಷ್ಟು ಮಹತ್ವ ಕೊಡಬೇಕೋ ಅಷ್ಟು ಕೊಟ್ಟಿರುವುದಿಲ್ಲವಷ್ಟೆ ಅಲ್ಲ, ಈ ಯೋಜನೆಯ ಸಫಲತೆಗಾಗಿ ಎಷ್ಟು ಆಳವಾಗಿ ವಿಚಾರಮಾಡಿ ಸರಿಯಾದ ಪರಿಹಾರ ಕಂಡುಹಿಡಿಯಬೇಕಾಗಿತ್ತೋ ಅದರಲ್ಲಿ ಕೂಡ ತನ್ನ ದಡ್ಡತನವನ್ನು ತೋರಿಸಿದೆ. ಬದಲಾದ ಸರಕಾರದಿಂದ ಬದಲಾದ ವಿಚಾರ, ಯೋಜನೆ ಹೊರಬೀಳದೆ, ಅಧಿಕಾರಿಗಳ ಹಳೇ ವಿಚಾರಗಳನ್ನಷ್ಟೇ ಹೊಂದಿದೆ ಈ ಮಸೂದೆ.

ಪ್ರಾಥಮಿಕ ಶಿಕ್ಷಣ ಪುಕ್ಕಟೆಯಾಗಿ ಕೊಡಲಾಗುವುದೆಂದು ಮಸೂದೆ ಹೇಳುತ್ತದೆ. ಇತ್ತೀಚಿನ ವರ್ಷಗಳಲ್ಲಿ ಪ್ರತಿಯೊಂದು ಖಾಸಗಿ ಶಾಲೆಯಲ್ಲಿ ಹಣಕೊಡದೆ ಪ್ರವೇಶ ಸಿಗುವುದಿಲ್ಲ. ಅಲ್ಲದೆ ಪ್ರತಿ ತಿಂಗಳೂ ರೂ. 10ರಿಂದ 25 ರಷ್ಟು ಫೀ ಕೊಡಬೇಕಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಿದರೆ ಮಾತ್ರ ಪ್ರಾಥಮಿಕ ಶಿಕ್ಷಣ ಪುಕ್ಕಟೆಯಾಗಲು ಸಾಧ್ಯ. ಇಲ್ಲವಾದರೆ ಎಂಥ ಕಾನೂನು ಪಾಸು ಮಾಡಿದರೂ, ಕೂಡ ಅದು ಬರೇ ಪುಸ್ತಕದ ಬದನೇಕಾಯಿ ಆಗಿಯೇ ಉಳಿಯುತ್ತದೆ.

ತಪ್ಪಿತಸ್ಥ ಶಿಕ್ಷಣ ಸಂಸ್ಥೆಗಳನ್ನು ಸರಕಾರ ವಶಪಡಿಸಿಕೊಳ್ಳುವ ನಿಯಮವನ್ನು ಮಸೂದೆಯಲ್ಲಿ ಸೂಚಿಸಿದ್ದರೂ ಕೂಡ ಅಲ್ಪಮತಸ್ಥರು, ಅಲ್ಪಭಾಷಿಕರು ನಡೆಸುತ್ತಿರುವ ಸಂಸ್ಥೆಗಳು ಏನೇ ತಪ್ಪು ಮಾಡಿದರೂ ಅಂಥವರಿಗೆ ವಿನಾಯತಿ ತೋರಿಸಿರುವುದು ಸರಿಯಲ್ಲ. ಹೀಗಾದ್ದಲ್ಲಿ ಅಂಥ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರದಾರರಿಗೂ, ಕಲಿಯುವ ವಿದ್ಯಾರ್ಥಿಗಳಿಗೂ ಎಲ್ಲ ದೃಷ್ಟಿಯಿಂದಲೂ ಅನ್ಯಾಯವಾಗುತ್ತದೆ, ಪಕ್ಷಪಾತ ಮಾಡಿದಂತಾಗುತ್ತದೆ.

ಶಾಲಾ ಶಿಕ್ಷಕರಿಗೆ ರಕ್ಷಣೆ

ಖಾಸಗೀ ಶಿಕ್ಷಣ ಸಂಸ್ಥೆಗಳೆಲ್ಲ ಸರಕಾರಕ್ಕೂ, ಪಾಲಕರಿಗೂ, ಮಕ್ಕಳಿಗೂ ಮೋಸ ಮಾಡುತ್ತಿರುವಾಗ, ಆರೋಗ್ಯದಾಯಕ ಶಿಕ್ಷಣ ಮಕ್ಕಳಿಗೆ ಸಿಗಬೇಕಾದರೆ ಶಿಕ್ಷಣದ ಜವಾಬ್ದಾರಿಯನ್ನು ಸರಕಾರವೇ ವಹಿಸಿಕೊಳ್ಳುವ ಅಗತ್ಯತೆಯನ್ನು ಸಾರ್ವಜನಿಕರೂ, ಎಡಪಕ್ಷಗಳೂ ಒತ್ತಿ ಹೇಳುತ್ತಾ ಬಂದಿವೆ. ಹಾಗಿರುವಾಗ ಜನತಾ ಸರಕಾರ ತಾನು ತಯಾರಿಸುವ ಶಿಕ್ಷಣ ಮಸೂದೆಯಲ್ಲಿ ಈ ಅಂಶಕ್ಕೆ ಪ್ರಾಧಾನ್ಯತೆ ಕೊಡುತ್ತಾರೆಂದು ತಿಳಿಯಲಾಗಿತ್ತು. ಆದರೆ ಈಗ ಮಂಡಿಸಿರುವ ಮಸೂದೆ ಈ ವಿಷಯದಲ್ಲಿ ಮೌನವಾಗಿಯಲ್ಲದೆ, ಕಾನೂನುಗಳನ್ನು ಅಂಥ ಸಂಸ್ಥೆಗಳ ಸಲುವಾಗಿಯೇ ರೂಪಿಸಿಕೊಂಡಿದೆ ಸರಿಯಾದ ವಿದ್ಯಾಭ್ಯಾಸ ಒದಗಿಸಬೇಕೆಂಬ ಮಹೋದ್ದೇಶವನ್ನು ಸಾಧಿಸಲು ಇಂಥ ಮಸೂದೆಯಿಂದ ಸಾಧ್ಯವಿಲ್ಲ.

ಈ ಶಿಕ್ಷಣ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಶಿಕ್ಷಕರಿಗೆ, ನೌಕರರಿಗೆ ಯಾವ ರೀತಿಯ ರಕ್ಷಣೆಯೂ ಇಲ್ಲ. ಈಗಿನ ಬದಲಾದ ಪರಿಸ್ಥಿತಿಯಲ್ಲಿ ಖಾಸಗೀ ಮ್ಯಾನೇಜ್‌ಮೆಂಟ್‌ನಲ್ಲಿ ಸರಿಯಾದ ಅಧಿಕಾರ ಇರಬೇಕಾದ್ದು ಅಗತ್ಯ. ಬೋರ್ಡಿನಲ್ಲಿ 2 ಶಿಕ್ಷಕರ ಪ್ರತಿನಿಧಿಗಳನ್ನಷ್ಟೇ ತೆಗೆದುಕೊಳ್ಳಬಹುದೆಂದು ಹೇಳಿರುವುದಷ್ಟೆ ಅಲ್ಲದೆ ಬೇರೆ ಯಾವ ರಕ್ಷಣೆಯೂ ಆ ಮಸೂದೆಯಲ್ಲಿಲ್ಲ. ಹೆಚ್ಚಿನ ಪ್ರಾತಿನಿಧ್ಯ ಇವರಿಗೆ ಸಿಗುವುವುದು ಅಗತ್ಯ.

ಹಾಗೆಯೇ ಪಠ್ಯಪುಸ್ತಕ ತಯಾರಿಕೆಯಲ್ಲಿ ಕೂಡ ಶಿಕ್ಷಕರ ಪಾತ್ರ ಪ್ರಧಾನವಾಗಿರಬೇಕು. ಹಾಗೆಯೇ ಪುರೋಗಾಮಿ ವಿಚಾರ ಉಳ್ಳ ಶಿಕ್ಷಣ ತಜ್ಞರ ಸಲಹೆ ಅತ್ಯಗತ್ಯ. ವಸೂಲಿ ಬಾಜಿ ಹಣದ ಪ್ರಜಾತಿ, ಜಾತಿ ಪಕ್ಷಗಳ ಪ್ರಭಾವದಿಂದ ಯಾರನ್ನೋ ಹಿಡಿದು ಏನೋ ಪಠ್ಯ ಪುಸ್ತಕಗಳನ್ನು ಬರೆಸುವ ಪರಿಪಾಠ ಈ ಹಿಂದೆಯೂ ಇತ್ತು. ಈಗಲೂ ಇದೆ. ಇಂಥ ಕೆಟ್ಟ ಪದ್ಧತಿ ರದ್ದಾಗಬೇಕು. ನಿಜವಾದ ತಜ್ಞರ ಸಮಿತಿ ಪಠ್ಯಪುಸ್ತಕಗಳ ತಯಾರಿಯ ಜವಾಬ್ದಾರಿ ಹೊರಬೇಕು. ಮೇಲಿಂದ ಮೇಲೆ ಪಠ್ಯಪುಸ್ತಕಗಳನು ಬದಲಾಯಿಸುವ ಪರಿಪಾಠವನ್ನು ಕೈಬಿಡಬೇಕು. ವೇಳೆಗೆ ಸರಿಯಾಗಿ ಪುಸ್ತಕಗಳನ್ನು ಒದಗಿಸುವ ವ್ಯವಸ್ಥೆ ಆಗಬೇಕು,

ನಿರ್ದಿಷ್ಟ ಧೋರಣೆ ಅಗತ್ಯ

ಶಿಕ್ಷಣ ಕೇಂದ್ರದಲ್ಲಿ ಆಡಳಿತ ನಡೆಸುವವರಿಗೆ ನಿರ್ದಿಷ್ಟ ಧೋರಣೆ ಇರುವುದು ಅತ್ಯಗತ್ಯ. ತಮ್ಮ ಆಡಳಿತೆಯಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸುವ ನೌಕರದಾರರನ್ನು ತಯಾರಿಸುವುದೇ ಬ್ರಿಟಿಷರ ಗುರಿಯಾಗಿತ್ತು. ಅವರು ದೇಶ ಬಿಟ್ಟು ಹೋಗಿ 36 ವರ್ಷಗಳಾದರೂ ಕೇಂದ್ರ ಸರಕಾರವಾಗಲೀ ರಾಜ್ಯ ಸರಕಾರಗಳಾಗಲೀ, ಸ್ವತಂತ್ರ ದೇಶದ ಮಕ್ಕಳಿಗೆ ಯಾವ ತರದ ಶಿಕ್ಷಣ ಒದಗಿಸಬೇಕೆಂಬ ವಿಚಾರದಲ್ಲಿ ಯಾವುದೇ ನಿರ್ದಿಷ್ಟ ನಿಲುವೆಯನ್ನು ಇಂದಿಗೂ ಪ್ರಕಟಿಸಿರುವುದಿಲ್ಲ. ದೇಶದ ಸ್ವಾತಂತ್ರ್ಯ ಸಂಗ್ರಾಮ, ಇತರ ದೇಶದ ಜನರ ಹೋರಾಟಗಳು, ಸಮತಾವಾದಿ ದೇಶಗಳಲ್ಲಿಯ ಕ್ರಾಂತಿ. ಒಕ್ಕಲುತನ, ಔದ್ಯೋಗಿಕರಣ ಮೊದಲಾದ ವಿಷಯಗಳ ಕುರಿತು ಸೂಕ್ಷ್ಮ ಪರಿಚಯ ಅತ್ಯಗತ್ಯ. ಇದನ್ನೆಲ್ಲ ಬಿಟ್ಟು ಬ್ರಿಟಿಷ್ ಕಾಲದ ಪರಂಪರೆಯನ್ನೇ ಪಠ್ಯಪುಸ್ತಕಗಳಲ್ಲಿಯೂ, ಪರೀಕ್ಷೆಗಳಲ್ಲಿಯೂ ಮುಂದುವರಿಸಲಾಗುತ್ತಿದೆ. ಹೊಸ ಸಮಾಜ ಕಟ್ಟುವ ದೇಶವನ್ನು ಅಭಿವೃದ್ಧಿಗೊಳಿಸುವ ಜಾತೀಯ ಮತೀಯತೆಯ ವಿರುದ್ಧ ಹೋರಾಡುವ, ಶೋಷಣೆಯ ವಿರುದ್ಧ ಚಳುವಳಿ ಹೂಡುವ, ವಿಭಿದ್ರಕಾರಿ ಶಕ್ತಿಗಳನ್ನೆದುರಿಸುವಂಥ ಹೊಸ ವಿಚಾರಗಳು ನಮ್ಮ ಮಕ್ಕಳಲ್ಲಿ ಮೂಡಿ ಬರಬೇಕಾದರೆ ನಮ್ಮ ರಾಜ್ಯದ ಶಿಕ್ಷಣ ಮಂತ್ರಿ ರಾಚಯ್ಯನವರು ತಯಾರಿಸಿರುವ ಶಿಕ್ಷಣ ಮಸೂದೆಯಿಂದ ಶಕ್ಯವಿಲ್ಲ. ಜನತಾ ಸರಕಾರಕ್ಕೂ ಈ ಮಸೂದೆಯಿಂದ ಶಹಾಭಾಷ್‌ಗಿರಿ ಸಿಗಲು ಸಾಧ್ಯವಿಲ್ಲ. ಆದ್ದರಿಂದ ಶಿಕ್ಷಕರೂ, ವಿದ್ಯಾರ್ಥಿಗಳೂ, ಪ್ರಜ್ಞಾವಂತ ಜನರೂ ಈ ಮಸೂದೆಯನ್ನು ಅಭ್ಯಾಸಮಾಡಿ ಮಕ್ಕಳಿಗೆ ಉಪಯೋಗಕರವಾದಂಥಾ ಮಸೂದೆ ವಿಧಾನ ಸಭೆಯಲ್ಲಿ ಪಾಸಾಗುವಂತೆ ಮಾಡುವುದು ಅತ್ಯಗತ್ಯ.

ಮಧ್ಯಪ್ರದೇಶ

ಅಖಿಲ ಭಾರತ ವೈದ್ಯಕೀಯ ವಿದ್ಯಾರ್ಥಿಗಳ ಸಮಾವೇಶ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕೇಂದ್ರ ಸಮಿತಿಯು 1983ರ ಜುಲೈ 31 ರಿಂದ ಆಗಸ್ಟ್ 2ರ ವರೆಗೆ ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಅಖಿಲ ಭಾರತ ವೈದ್ಯಕೀಯ ವಿದ್ಯಾರ್ಥಿಗಳ ಸಮಾವೇಶವೊಂದನ್ನು ನಡೆಸಿತು. ಪಶ್ಚಿಮಬಂಗಾಳದ ಎಡರಂಗ ಸರ್ಕಾರದ ಆರೋಗ್ಯ ಮಂತ್ರಿ ಕಾಮ್ರೇಡ್ ಅಮರೀಶ ಮುಖರ್ಜಿಯವರು ಸಮಾವೇಶವನ್ನು ಉದ್ಘಾಟಿಸಿದರು. ಸಮಾವೇಶದ ಸ್ಥಳಕ್ಕೆ ಡಾ॥ ಕೊಟ್ನೀಸ್ ನಗರವೆಂದು ಹೆಸರಿಸಲಾಗಿತ್ತು.

ಎಸ್.ಎಫ್.ಐ ಪ್ರಧಾನ ಕಾರ್ಯದರ್ಶಿ, ರಾಜ್ಯಸಭೆ ಸದಸ್ಯರಾದ ಕಾಮ್ರೇಡ್ ನೇಪಾಲ್‌ದೇವ್ ಭಟ್ಟಾಚಾರ್ಯ ಧ್ವಜಾರೋಹಣ ಮಾಡಿ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಸ್ವಾಗತ ಸಮಿತಿ ಅಧ್ಯಕ್ಷರಾದ ಗ್ವಾಲಿಯರ್‌ನ ಜಿಯಾಜಿರಾವ್ ವಿಶ್ವವಿದ್ಯಾಲಯದ ಉಪಕುಲಪತಿ ಕೆ.ಕೆ. ತಿವಾರಿಯವರು ಸ್ವಾಗತ ಭಾಷಣ ಮಾಡಿದರು. ಡಾ॥ ಭಾಸ್ಕರ್‌ರಾಯ್ ಚೌಧರಿ, ಡಾ। ಬಿ. ಇಕ್ಬಾಲ್. ಡಾ। ಎಂ.ಎಸ್. ಚೌಧರಿ ಮತ್ತು ಡಾ॥ ಗೌರಿಪಾದ್ ದತ್ತಾರವರು ಉದ್ಘಾಟನಾ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು.

ವೈದ್ಯಕೀಯ ಶಿಕ್ಷಣ, ಭಾರತ ಸರಕಾರದ ಆರೋಗ್ಯ ನೀತಿ ಮತ್ತು ವೈದ್ಯಕೀಯ ವಿದ್ಯಾರ್ಥಿಗಳ ಸಮಸ್ಯೆಗಳ ಕುರಿತ ವಿಮರ್ಶಾತ್ಮಕ ವರದಿಯನ್ನು ಸಿದ್ಧತಾ ಸಮಿತಿಯ ಸಂಚಾಲಕರಾಗಿದ್ದ ಡಾ। ಅಶೋಕ್ ಧಾವಲೆ ಸಮಾವೇಶದ ಮುಂದೆ ಮಂಡಿಸಿದರು. ವರದಿಯ ಮೇಲೆ ಪ್ರತಿನಿಧಿಗಳು ಸುದೀರ್ಘ ಚರ್ಚೆ ನಡೆಸಿದರು. ಸಮಾವೇಶದಲ್ಲಿ ಸುಮಾರು 150 ಮಂದಿ ವೈದ್ಯಕೀಯ ವಿದ್ಯಾರ್ಥಿಗಳು, ವೈದ್ಯರುಗಳು ಮತ್ತು ವಿದ್ಯಾರ್ಥಿ ಮುಖಂಡರು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು.

ಎಸ್.ಎಫ್.ಐ. ಕೇಂದ್ರ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ನೇಪಾಲ್‌ದೇವ್ ಭಟ್ಟಾಚಾರ್ಯ ಸಮಾರೋಪ ಭಾಷಣ ಮಾಡುತ್ತಾ ವೈದ್ಯಕೀಯ ವಿದ್ಯಾರ್ಥಿಗಳ ಸಂಘಟನೆಗೆ ಎಸ್.ಎಫ್.ಐ ವಿಶೇಷ ಗಮನ ನೀಡಿ ಈ ವಿಭಾಗದ ಚಳುವಳಿಯು ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಚಳುವಳಿಯ ಒಂದು ಭಾಗವಾಗಿ ಬೆಳೆಸಲು ಶ್ರಮಿಸುತ್ತಿದೆಯೆಂದು ಹೇಳಿದರು. ಅಧ್ಯಕ್ಷ ಮಂಡಳಿಯ ಪರವಾಗಿ ಮಾತನಾಡಿದ ಡಾ॥ ಸುಜಾತಾ ಧಾವಲೆಯವರು ಈ ಸಮಾವೇಶವು ವೈದ್ಯಕೀಯ ವಿದ್ಯಾರ್ಥಿಗಳ ಚಳುವಳಿಗೆ ಮಾತ್ರವಲ್ಲದೆ ಇಡೀ ರಾಷ್ಟ್ರದಲ್ಲೇ ವೈದ್ಯರುಗಳ ಪ್ರಜಾಸತ್ತಾತ್ಮಕ ಚಳುವಳಿಗೆ ನಾಂದಿಯಾಗುವುದೆಂದು ನುಡಿದರು. ಅಂತಿಮವಾಗಿ ಎಸ್.ಎಫ್.ಐ ಅಧ್ಯಕ್ಷರಾದ ಕಾಂ। ಎಂ.ಎ. ಬೇಬಿಯವರು ಈ ಅಭೂತಪೂರ್ವ ಸಮಾವೇಶದ ಸ್ಥಳಕ್ಕೆ ಡಾ। ಕೊಟ್ನಿಸ್‌ರವರ ಹೆಸರನ್ನು ಇಟ್ಟಿದ್ದರ ಔಚಿತ್ಯವನ್ನು ವಿವರಿಸುತ್ತಾ ಕೊಟ್ನೀಸ್‌ರವರ ಜನತಾ ಸೇವೆಯನ್ನು ಸ್ಮರಿಸಿದರು. ಡಾ॥ ಕೊಟ್ನಿಸ್‌ರವರು ಚೈನಾದೇಶದಲ್ಲಿ ಅಂತರ್ಯುದ್ಧ ನಡೆಯುತ್ತಿದ್ದ ಸಂದಿಗ್ಧ ಸಂದರ್ಭದಲ್ಲಿ ಭಾರತದಿಂದ ಚೀನಾಕ್ಕೆ ಹೋಗಿ ಅಲ್ಲಿನ ಸಮರಶೀಲ ಕ್ರಾಂತಿಕಾರಿಗಳಿಗೆ ರಣರಂಗದಲ್ಲಿ ಚಿಕಿತ್ಸೆ ನೀಡಿ ಸೇವೆ ಸಲ್ಲಿಸಿದ್ದು ಮಾತ್ರವಲ್ಲದೆ ಚೈನಾ ದೇಶದ ಕ್ರಾಂತಿಕಾರಿ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಅಪಾರ ಕೊಡುಗೆ ಸಲ್ಲಿಸಿದರು ಎಂದು ಪ್ರಶಂಸಿದರು. ಡಾ। ಕೊಟ್ನಿಸ್‌ರವರ ಮಾದರಿಯಲ್ಲಿ, ವೈದ್ಯರುಗಳು ವ್ಯಕ್ತಿಗಳ ಕಾಯಿಲೆಯನ್ನು ಗುಣಪಡಿಸುವುದು ಮಾತ್ರವಲ್ಲದೆ ಸಮಾಜದ ಕಾಯಿಲೆಗಳನ್ನು ಗುಣಪಡಿಸಲು ಹೋರಾಡುವ ಚಿಕಿತ್ಸಕರಾಗಬೇಕೆಂದು ಕರೆ ನೀಡಿದರು.

ವೈದ್ಯಕೀಯ ವಿದ್ಯಾರ್ಥಿಗಳ ಸಂಘಟನೆಯ ಉಸ್ತುವಾರಿಗೆ ಡಾ॥ ಅಶೋಕ್ ಧಾವಲೆ ಸಂಚಾಲಕರಾಗಿರುವ ಎಂಟುಮಂದಿಯ ಉಪ ಸಮಿತಿಯೊಂದನ್ನು ರಚಿಸಿದ ಎಸ್.ಎಫ್.ಐ. ಕೇಂದ್ರ ಸಮಿತಿಯು ಸಮಾವೇಶದಲ್ಲಿ ಘೋಷಿಸಿತು.

ಸಮಾವೇಶದ ಅಂಗವಾಗಿ ಸಂಜೆ ಗ್ವಾಲಿಯರ್‌ನ ಮಹಾರಾಜಾವಾಡಾದಲ್ಲಿ ಭಾರಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಎಸ್.ಎಫ್.ಐ. ಅಧ್ಯಕ್ಷ ಕಾಂ। ಎಂ.ಎ ಬೇಬಿ ಸಭೆಯ ಅಧ್ಯಕ್ಷತೆ ವಹಿಸಿದ್ದರು, ಮಧ್ಯಪ್ರದೇಶದ ಎಸ್.ಎಫ್.ಐ ನಾಯಕ ಕಾ॥ ಶೈಲೇಂದ್ರ ಶೈಲಿ ಸ್ವಾಗತಿಸಿದರು. ಬಹಿರಂಗ ಸಭೆಯನ್ನುದ್ದೇಶಿಸಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೇರಳದ ತ್ರಿವೇಂಡ್ರಮ್ ಮೆಡಿಕಲ್ ಕಾಲೇಜಿನ ಸಹ ಪ್ರಾಧ್ಯಾಪಕ ಡಾ। ಇಕ್ಬಾಲ್, ಎಸ್. ಎಫ್. ಐ. ಕೇಂದ್ರ ಸಮಿತಿ ಪದಾಧಿಕಾರಿಗಳಾದ ಡಾ। ಅಶೋಕ್ ಧಾವಲೆ, ಸೀತಾರಾಂ ಯೆಚುರಿ, ಎಸ್.ಎಫ್.ಐ. ನಾಯಕರೂ ಹಾಗೂ ಪಾರ್ಲಿಮೆಂಟ್ ಸದಸ್ಯರೂ ಆಗಿರುವ ಕಾಮ್ರೇಡ್ ನೇಪಾಲ್‌ದೇವ್ ಭಟ್ಟಾಚಾರ್ಯ ಮತ್ತು ಸೈಫುದ್ದೀನ್ ಚೌಧರಿಯವರು ಮಾತನಾಡಿದರು.

ಬಹಿರಂಗ ಸಭೆಯ ಒಂದು ವಿಶೇಷ ಆಕರ್ಷಣೆಯೆಂದರೆ ದೇಶದ ನಾನಾ ಭಾಗಗಳಿಂದ ಬಂದಿದ್ದ ಎಸ್.ಎಫ್.ಐ ರಾಜ್ಯ ನಾಯಕರುಗಳು ರಾಷ್ಟ್ರೀಯ ಸಮಗ್ರತೆಯ ಸೂಚಕವಾಗಿ ಆಯಾ ರಾಜ್ಯ ಭಾಷೆಗಳಲ್ಲೇ ಭಾಷಣಮಾಡಿದರು. ಈ ಭಾಷಣಗಳನ್ನು ತರುವಾಯ ಹಿಂದಿ ಭಾಷೆಯಲ್ಲಿ ಅನುವಾದ ಮಾಡಲಾಯಿತು. ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದ್ದ ಎಸ್.ಎಫ್. ಐ. ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಮೆಡಿಕಲ್ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂದು ಒತ್ತಾಯಿಸಿ ಕನ್ನಡ ಭಾಷೆಯಲ್ಲೇ ಭಾಷಣಮಾಡಿ ಕರ್ನಾಟಕದಲ್ಲಿ ಡೊನೇಷನ್-ಕ್ಯಾಪಿಟೇಶನ್ ಶುಲ್ಕದ ರದ್ದತಿಗೆ ಒತ್ತಾಯಿಸಿ ಎಸ್. ಎಫ್. ಐ. ಹಮ್ಮಿಕೊಂಡಿರುವ ದಶಲಕ್ಷ ಸಹಿ ಸಂಗ್ರಹದ ಚಳುವಳಿಯ ಬಗ್ಗೆ ತಿಳಿಸಿದರು, ಬಹಿರಂಗ ಸಭೆಯಲ್ಲಿ ಪರಿಣಾಮಕಾರಿಯಾದ ಭಾಷಣ ಮಾಡಿದ ಕಾಂ। ನೇಪಾಲ್ ಭಟ್ಟಾಚಾರ್ಯ ಮತ್ತಿತರರು ರಾಷ್ಟ್ರದ ಐಕ್ಯತೆಗೆ ಒದಗಿಬಂದಿರುವ ಭಾರಿ ಗಂಡಾಂತರದ ಬಗ್ಗೆ ಜನತೆಯನ್ನು ಎಚ್ಚರಿಸಿ ಕಾಂಗ್ರೆಸ್ (ಐ) ಸರ್ಕಾರದ ಜನವಿರೋಧಿ ಧೋರಣೆಗಳನ್ನು ಖಂಡಿಸಿದರು. ಎಸ್. ಎಫ್. ಐ. ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ ಮತ್ತು ಇದರೊಂದಿಗೆ "ಸರ್ವರಿಗೂ ಆರೋಗ್ಯ" ವನ್ನು ದೊರಕಿಸಲು ದೇಶಾದ್ಯಂತ ಬಲಿಷ್ಟವಾದ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಚಳುವಳಿಯನ್ನು ರೂಪಿಸುವುದೆಂದು ಘೋಷಿಸಿದರು. ಎಸ್. ಎಫ್. ಐ. ಮಧ್ಯಪ್ರದೇಶ ರಾಜ್ಯ ಶಾಖೆ ಕಾರ್ಯದರ್ಶಿ ಕಾಮ್ರೇಡ್ ಪ್ರಮೋದ್ ಪ್ರಧಾನ್ ವಂದನಾರ್ಪಣೆ ಸಲ್ಲಿಸಿದರು. ಘೋಷಣೆಗಳೊಂದಿಗೆ ಸಮಾವೇಶ ಮುಕ್ತಾಯಗೊಂಡಿತು.

ಕೆ. ಜಿ. ಎಫ್ :

ಬೆಲೆಯೇರಿಕೆ ವಿರುದ್ಧ ಪ್ರದರ್ಶನ-ಬಂಧನ

ರಾಜ್ಯ ಸಮಿತಿಯ ಆದೇಶದ ಮೇರೆಗೆ 11–8–83ರಂದು ಪಕ್ಷದ ಕೆ. ಜಿ. ಎಫ್, ಘಟಕದ ನೂರಾರು ಕಾರ್ಯಕರ್ತರು ಬೆಲೆ ಏರಿಕೆ ವಿರುದ್ಧ ಪ್ರದರ್ಶನ ನಡೆಸಿದರು.

ಕೇಂದ್ರ ಮತ್ತು ರಾಜ್ಯ ಸರಕಾರಗಳ ಮಲತಾಯಿ ಧೋರಣೆಯನ್ನು ಖಂಡಿಸಿ, ಜನತಾ ಸರಕಾರ ಚುನಾವಣೆ ಸಮಯದಲ್ಲಿ ಕರ್ನಾಟಕದ ಜನತೆಗೆ ಕೊಟ್ಟ ಆಶ್ವಾಸನೆಯನ್ನು ಈಡೇರಿಸದೆ ಇರುವುದನ್ನು ಖಂಡಿಸಿ. ಬೆಲೆ ಏರಿಕೆಯನ್ನು ಕೂಡಲೇ ತಡೆಗಟ್ಟುವಂತೆ ಮತ್ತುನ್ಯಾಯ ಬೆಲೆ ಅಂಗಡಿಗಳನ್ನು ತೆರೆದು ಶ್ರೀಸಾಮಾನ್ಯರಿಗೆ ಅಗತ್ಯ ವಸ್ತುಗಳನ್ನು ನ್ಯಾಯವಾಗಿ ಸಿಗುವಂತೆ ಮಾಡಬೇಕು ಮತ್ತು ಕೇಂದ್ರ ಸರಕಾರದಿಂದ ರಾಜ್ಯ ಸರಕಾರಕ್ಕೆ ಬರಬೇಕಾದ ಕೋಟಾವನ್ನು ಕೇಳಿ ಪಡೆದು "ರೈತರು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆಯನ್ನು ಕೊಡಬೇಕೆಂದು" ಘೋಷಣೆಗಳನ್ನು ಕೂಗುತ್ತಾ 9-30ಕ್ಕೆ ಮೈಸೂರು ಬ್ಯಾಂಕ್‌ನ ಮುಂದೆ ಬೆಲೆಯೇರಿಕೆ ವಿರೋಧಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ಮುಂದಾಳತ್ವವನ್ನು ಸಿ. ಪಿ. ಐ. (ಎಂ) ನಾಯಕರಾದ ಕಾ। ಟಿ. ಎಸ್. ಮಣಿ, ಸಮರಿದಾಸ್, ಎಸ್. ಟಿ. ಎಸ್. ಅಶ್ವಥನಾರಾಯಣ ಇವರುಗಳು ವಹಿಸಿದ್ದರು. ಸುಮಾರು 130 ಜನರನ್ನು 12 ಗಂಟೆಗೆ ಪೋಲಿಸರು ಬಂಧಿಸಿ ನಾಲ್ಕು ಗಂಟೆಗೆ ಬಿಡುಗಡೆ ಮಾಡಿದರು.

ತಮಿಳುನಾಡು

ಎಲ್ಲೆಲ್ಲೂ ಬೀಗಮುದ್ರೆ, ರಿಟ್ರೆಂಚ್‌ಮೆಂಟ್‌ಗಳ ಮೂಲಕ ಹಲ್ಲೆ

ದೇಶದ ಇತರೆಡೆಗಳಂತೆ ತಮಿಳುನಾಡಿನಲ್ಲೂ ಹಲವಾರು ಕಾರ್ಖಾನೆಗಳು ಮುಚ್ಚಿ, ರಿಟ್ರೆಂಚ್‌ಮೆಂಟ್ ಮೂಲಕ ಕಾರ್ಮಿಕರು ಬೀದಿ ಪಾಲಾಗುತ್ತಿದ್ದಾರೆ. ಬೀಗ ಮುದ್ರೆ, ಲೇ ಆಫ್‌ನಿಂದಾಗಿ ನರಳುತ್ತಿದ್ದಾರೆ.

ನೆಲ್ಲಿಕುಪ್ಪಂನಲ್ಲಿರುವ ಇ. ಐ. ಡಿ. ಪ್ಯಾರೀಯವರ ಸಕ್ಕರೆ ಕಾರ್ಖಾನೆಯನ್ನು 800 ಕಾರ್ಮಿಕರು ಜಾಸ್ತಿಯಿದ್ದಾರೆ, ಕಾರ್ಖಾನೆ ನಷ್ಟ ಅನುಭವಿಸುತ್ತಿದೆ, ಎಂಬ ಹಸೀ ಸುಳ್ಳು ಹೇಳಿ ಆಗಸ್ಟ್ 8ರಿಂದ ಮುಚ್ಚುವ ಬೆದರಿಕೆ ಒಡ್ಡಲಾಗಿದೆ. ಇದರಿಂದ 2 ಸಾವಿರ ಕಾರ್ಮಿಕರು ಹಾಗೂ 15 ಸಾವಿರ ಕಬ್ಬು ಬೆಳೆಗಾರರು ತೊಂದರೆಗೊಳಗಾಗುತ್ತಾರೆ. ಈ ಕಾರ್ಖಾನೆಯನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಆಂದೋಲನ ಪ್ರಾರಂಭವಾಗಿದೆ 600 ಕಾರ್ಮಿಕರು ದುಡಿಯುತ್ತಿರುವ ಅಂಬತ್ತೂರಿನ ಎಸ್. ಎಸ್. ಕೃಷ್ಣರಾವ್ ಬಾಡಿ ವರ್ಕ್ಸ್, 300 ಕಾರ್ಮಿಕರಿರುವ ಮದ್ರಾಸಿನ ಶೀಟ್ ಗ್ಲಾಸ್ ಫ್ಯಾಕ್ಟರಿ ಮಾಲೀಕರುಗಳು ಕಾರ್ಖಾನೆಗಳನ್ನು ಮುಚ್ಚುವ ನೋಟೀಸು ಕೊಟ್ಟಿದ್ದಾರೆ. ಸಿ. ಐ. ಟಿ. ಯು. ಸಂಘಗಳು ಇದರ ವಿರುದ್ಧ ಹೋರಾಟ ನಡೆಸುತ್ತಿವೆ.

20 ತಿಂಗಳಿಂದ ಮುಚ್ಚಿರುವ ಟ್ರಾನ್ಸ್‌ಫಾರ್ಮರ್ ಅಂಡ್ ಸ್ವಿಚ್‌ಗೇರ್ಸ್‌ನ 300 ಕಾರ್ಮಿಕರು, ಸರಕಾರೀ ಸ್ವಾಮ್ಯದ ಬೋಟ್ ಬಿಲ್ಡಿಂಗ್ ಯಾರ್ಡ್‌ನ ನಾಲ್ಕು ಘಟಕಗಳು ಮುಚ್ಚಿರುವುದರಿಂದ ಬೀದಿ ಪಾಲಾಗಿರುವ 600 ಕಾರ್ಮಿಕರು, ಒಂದು ವರ್ಷದಿಂದ ಮುಚ್ಚಿರುವ ತಿರುಪ್ಪೂರ್ ಗಿರಣಿಯ ಒಂದು ಸಾವಿರ ಕಾರ್ಮಿಕರು ಎಂಟು ತಿಂಗಳಿಂದ ಮುಚ್ಚಿರುವ ಕನ್ಯಾಕುಮಾರಿಯ ನಾರು ಕಾರ್ಖಾನೆಯ ಕಾರ್ಮಿಕರು ಕಾರ್ಖಾನೆಗಳನ್ನು ಮತ್ತೆ ತೆರೆಯಬೇಕೆಂಬ ಬೇಡಿಕೆಯನ್ನಿಟ್ಟು ಹೋರಾಟ ಮುಂದುವರಿಸುತ್ತಿದ್ದಾರೆ. ಸಿಮ್ಕೊ ಮೀಟರ್ಸ್, ಅಪ್ಪರ್ ಇಂಡಿಯಾ ಬೇರಿಂಗ್ಸ್ ಇತ್ಯಾದಿ ಕಂಪೆನಿಗಳಿಗೆ ತಮ್ಮ ಕಾರ್ಮಿಕರನ್ನು ರಿಟ್ರೆಂಚ್ ಮಾಡಲು ತಮಿಳುನಾಡು ಸರ್ಕಾರ ಅನುಮತಿ ನೀಡಿದೆ. ತಮಿಳುನಾಡು ಹಾಗೂ ಪಾಂಡಿಚೇರಿಯ ಬಟ್ಟೆ ಗಿರಣಿಗಳು ಆಧುನೀಕರಣದ ನೆವವೊಡ್ಡಿ ಕಾರ್ಮಿಕರನ್ನು ರಿಟ್ರೆಂಚ್‌ಮಾಡಿ, ಅದೇ ಕಾರ್ಮಿಕರನ್ನು ಶ್ರಮಭಾರ ಹೆಚ್ಚಳದ ಹೊಸ ಷರತ್ತುಗಳಿಗೆಲ್ಲಾ ಒಪ್ಪಿದರೆ ಮತ್ತೆ ಕೆಲಸಕ್ಕೆ ಹೊಸದಾಗಿ ನೇಮಿಸಿಕೊಳ್ಳುವ ಹೊಸ ಬಗೆಯ ಶೋಷಣೆ ಆರಂಭಿಸಿವೆ.

ಸೇಲಂ ಜಿಲ್ಲೆಯಲ್ಲಿರುವ ಮೆಟ್ಟೂರ್ ಕೆಮಿಕಲ್ಸ್, ಕೊಯಮತ್ತೂರ್ ಜಿಲ್ಲೆಯ ಸೌತ್ ಇಂಡಿಯಾ ವಿಸ್ಕೋಸ್, ಮದ್ರಾಸಿನ ಅಶೋಕ್ ಲೈಲಾಂಡ್, ವಿಮ್ಕೋ ಇತ್ಯಾದಿ ಕಂಪೆನಿಗಳು ಸತತ ಲೇ ಆಫ್‌ಗಳ ಮೂಲಕ ಕಾರ್ಮಿಕರಿಗೆ ಕಿರುಕುಳ ಕೊಡುತ್ತಿವೆ.

ಕೈಮಗ್ಗ, ಬೀಡಿ, ಗೇರುಬೀಜ ಇತ್ಯಾದಿ ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಹಿಂಜರಿತ, ವಿದ್ಯುತ್ ಪೋತಾ ಕಚ್ಚಾ ಸಾಮಗ್ರಿಗಳ ಅಭಾವ, ಜತೆಗೆ ರಾಜ್ಯ ಸರ್ಕಾರ ಹಾಗೂ ಅಪೆಕ್ಸ್ ಸಂಘಗಳು ತೆರಬೇಕಾದ ಬಾಕಿಯನ್ನು ಪಾವತಿ ಮಾಡದಿರುವುದರಿಂದ ಸಾವಿರಾರು ಕಾರ್ಮಿಕರು ಕೆಲಸ ಕಳಕೊಳ್ಳಬೇಕಾಗಿ ಬಂದಿದೆ.

ಇವೆಲ್ಲದರ ಬಗ್ಗೆ ರಾಜ್ಯ ಸರಕಾರ ಅತ್ಯಂತ ಉಪೇಕ್ಷೆಯ ಧೋರಣೆ ತಳೆದಿದೆ. ಕೆಲವು ಸಂದರ್ಭಗಳಲ್ಲಂತೂ ಮಾಲೀಕರಿಗೇ ನೆರವು ನೀಡಿ ಕಾರ್ಮಿಕರಿಗೆ ಮೋಸ ಮಾಡಿದೆ. ಸಿ.ಐ.ಟಿ.ಯು. ರಾಜ್ಯ ಸಮಿತಿ ಈ ಎಲ್ಲಾ ಹಲ್ಲೆಗಳ ವಿರುದ್ಧ ಕಾರ್ಮಿಕರನ್ನು ಸಂಘಟಿಸಿ ಹೋರಾಟಕ್ಕಿಳಿಯಲು ನಿರ್ಧರಿಸಿದೆ.

ಕುಂದಾಪುರ

ಸಂಯುಕ್ತ ಕಾರ್ಮಿಕ ಕ್ರಿಯಾ ಸಮಿತಿಯ ಸಭೆ

ತಾರೀಕು 2–8–1983ರಂದು ಸಂಯುಕ್ತ ಕಾರ್ಮಿಕ ಕ್ರಿಯಾ ಸಮಿತಿ ಕುಂದಾಪುರ ಇದರ ಸಭೆಯು ಶ್ರೀಯುತ ಎಚ್. ನರಸಿಂಹ ಶೆಣೈಯವರ ಅಧ್ಯಕ್ಷತೆಯಲ್ಲಿ ಸೇರಿತು. ಆರಂಭದಲ್ಲಿ ಸಮಿತಿಯ ಸಂಚಾಲಕರಾದ ಶ್ರೀಯುತ ಕೆ. ಸುಕುಮಾರ್ ಇವರು ಸ್ವಾಗತಿಸಿ, ವರದಿಯನ್ನು ಒಪ್ಪಿಸಿದರು.

ಸಭೆಯಲ್ಲಿ ಎಲ್ಲಾ ಕೇಂದ್ರ ಸಂಘಟನೆಗಳ ಹಾಗೂ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯ ಕುರಿತು ತೀವ್ರ ಕಳವಳವನ್ನು ವ್ಯಕ್ತಪಡಿಸಿ, ಕೇಂದ್ರ ಸರಕಾರದ ಹಾಗೂ ರಾಜ್ಯ ಸರಕಾರದ ಜನವಿರೋಧಿ ನೀತಿಯನ್ನು ಖಂಡಿಸಲಾಯಿತು.

ಕರ್ನಾಟಕ ರಾಜ್ಯದಲ್ಲಿ ಆಹಾರ ಧಾನ್ಯಗಳ ತೀವ್ರ ಅಭಾವವಿರುವುದನ್ನು ಗಂಭೀರವಾಗಿ ಗಮನಿಸಿ, ಕೇಂದ್ರದ ಸಂಗ್ರಹದಿಂದ ರಾಜ್ಯಕ್ಕೆ ಸಾಕಷ್ಟು ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಿತು.

ಬೆಲೆಯೇರಿಕೆಯನ್ನು ತಡೆಗಟ್ಟಿ, ಜನ ಸಾಮಾನ್ಯರಿಗೆ ಜೀವನಾವಶ್ಯಕ ವಸ್ತುಗಳು ಕಡಿಮೆ ಬೆಲೆಯಲ್ಲಿ ಸಿಗುವಂತಾಗಲು ಕರ್ನಾಟಕ ಸರಕಾರವು ಕೂಡಲೇ ಹಳ್ಳಿ-ಪಟ್ಟಣವೆಂಬ ಭೇದವಿಲ್ಲದೆ ಸಮಗ್ರ ಪಡಿತರ ಪದ್ಧತಿಯನ್ನು ಜ್ಯಾರಿಗೆ ತರಬೇಕೆಂದೂ ಹಾಗೂ ಕಾಳಸಂತೆ ಕೋರರನ್ನು ಶಿಕ್ಷಿಸಲು ಒತ್ತಾಯಿಸಿತು.

ಕರ್ನಾಟಕದ 26 ಕೈಗಾರಿಕೆಗಳಲ್ಲಿ ಕನಿಷ್ಠ ವೇತನಕ್ಕೆ ಸಂಬಂಧಪಟ್ಟು ವಿಳಂಬವಾದುದರ ಬಗ್ಗೆ ಗಂಭೀರವಾಗಿ ಪರಿಗಣಿಸಿ, ಸರಕಾರವು ಕೂಡಲೇ ಹೊಸ ಪ್ರಕಟಣೆ ಹೊರಡಿಸಿ ಹೆಚ್ಚಿನ ದರಗಳಲ್ಲಿ ಕನಿಷ್ಠ ಕೂಲಿ ನಿಗದಿ ಮಾಡಿ ಜ್ಯಾರಿ ಮಾಡಬೇಕೆಂದು ಒತ್ತಾಯಿಸಿತು.

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ಶಾಸಕಾಂಗ ವಿಭಾಗದಿಂದ

೮ನೇ ಹಣಕಾಸು ನಿಯೋಗಕ್ಕೆ ನಿವೇದನಾ ಪತ್ರ

೧.೦ : ಪ್ರಸ್ತಾವನೆ

1.1 : ಜನತೆಗೆ ಶಿಕ್ಷಣ, ಆಹಾರ ನೀರು, ಆರೋಗ್ಯ ಮತ್ತು ರಸ್ತೆಗಳನ್ನು ಒದಗಿಸುವ ದೊಡ್ಡ ಜವಾಬ್ದಾರಿಯನ್ನು ಸಂವಿಧಾನವು ರಾಜ್ಯಗಳಿಗೆ ವಹಿಸಿಕೊಟ್ಟಿರುತ್ತದೆ. ರಾಜ್ಯವು ಬೇಸಾಯಗಾರರಿಗೆ ಮತ್ತು ಕೈಗಾರಿಕೋದ್ಯಮಿಗಳಿಗೆ ಬೇಕಾಗುವ ಎಲ್ಲಾ ಸವಲತ್ತುಗಳನ್ನು ಅದರ ಬೆಳವಣಿಗೆ ಮತ್ತು ಪ್ರಗತಿಯ ದೃಷ್ಟಿಯಿಂದ ಒದಗಿಸಬೇಕಾಗಿದೆ.

1.2 : ಬರಗಾಲ, ಅನಾವೃಷ್ಟಿ, ನೆರೆ ಹಾಗೂ ಇನ್ನಿತರ ಪ್ರಾಕೃತಿಕ ವಿಕೋಪಗಳ ಸಂದರ್ಭಗಳಲ್ಲಿ ರಾಜ್ಯಗಳು ಜನತೆಗೆ ಸಹಾಯವನ್ನು ಒದಗಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಈ ವಿಕೋಪಗಳು ಆಗಾಗ್ಯೆ ಕಾಣಿಸಿಕೊಳ್ಳುತ್ತಿರುತ್ತವೆ. ಇವುಗಳು ರಾಜ್ಯದ ಮೇಲೆ ಆರ್ಥಿಕ ಹೊರೆಯನ್ನು ಹೆಚ್ಚಿಸುವ ಮೂಲಕ ಸಾಮಾನ್ಯ ಬೆಳವಣಿಗೆಗೆ ತಡೆಯನ್ನೊಡ್ಡುತ್ತವೆ.

1.3. ಹಣದುಬ್ಬರದಿಂದ ಬೆಲೆಗಳು ಮತ್ತು ಮೌಲ್ಯದಲ್ಲಾಗುವ ಪರಿಣಾಮಕ್ಕನುಗುಣವಾಗಿ, ಇದರ ಮೇಲೆ ಯಾವುದೇ ಹಿಡಿತ ರಾಜ್ಯಕ್ಕೆ ಇಲ್ಲದಿದ್ದಾಗ್ಯೂ, ರಾಜ್ಯಗಳು ತಮ್ಮ ನೌಕರವರ್ಗದ ವೇತನ ಮತ್ತು ತುಟ್ಟಿಭತ್ಯವನ್ನು ಒತ್ತಾಯ ಪೂರ್ವಕವಾಗಿ ಏರಿಸಲೇಬೇಕಾಗುತ್ತದೆ. ಕೇಂದ್ರ ಸರಕಾರವು ಕಾಲ ಕಾಲಕ್ಕೆ ತುಟ್ಟಿಭತ್ಯದಲ್ಲಿ ಮಾಡುವ ಹೆಚ್ಚಳವು, ರಾಜ್ಯ ಸರ್ಕಾರವೂ ತನ್ನ ನೌಕರವರ್ಗಕ್ಕೆ ತುಟ್ಟಿಭತ್ಯವನ್ನು ಅದಕ್ಕನುಗುಣವಾಗಿ ಹೆಚ್ಚಿಸುವ ಒತ್ತಾಯವನ್ನು ಹೇರುತ್ತವೆ.

೨.೦ : ಕರ್ನಾಟಕ-ವಿಶೇಷ ಗುಣಲಕ್ಷಣಗಳು

2.1 : ರಾಷ್ಟ್ರದಲ್ಲೇ ಅತ್ಯಂತ ಕಡಿಮೆ (14.5%) ಪ್ರಮಾಣದ ಪ್ರದೇಶಗಳು ಕರ್ನಾಟಕದಲ್ಲಿ ನೀರಾವರಿಗೊಳಪಟ್ಟಿವೆ. ಎಂತಲೇ ಹಿಂದಿನಿಂದಲೂ ಇದು ಅನಾವೃಷ್ಟಿ ಪ್ರದೇಶವಾಗಿ ಉಳಿದಿದೆ. ಈ ವರ್ಷ ರಾಜ್ಯದ ಒಟ್ಟು 19 ಜಿಲ್ಲೆಗಳಲ್ಲಿ 14 ಕ್ಕಿಂತ ಹೆಚ್ಚು ಜಿಲ್ಲೆಗಳು ತೀವ್ರವಾದ ಅನಾವೃಷ್ಟಿಗೆ ಒಳಪಟ್ಟವು. ರಾಜ್ಯದ ಒಂದಲ್ಲಾ ಒಂದು ಭಾಗಗಳು ನೆರೆಹಾವಳಿಗೆ ಒಳಗಾಗಿ ಅಪಾರ ನಷ್ಟವನ್ನು ಅನುಭವಿಸುತ್ತಿರುತ್ತವೆ. ಜನತೆಗೆ ಕುಡಿಯುವ ನೀರು ಒದಗಿಸುವುದು ದನಕರುಗಳಿಗೆ ಮೇವು ಒದಗಿಸುವ ಪ್ರಶ್ನೆಗಳು ಮರುಕಳಿಸುವ ದೊಡ್ಡ ಸಮಸ್ಯೆಯಾಗಿದೆ.

2.2 : ವಸಾಹತುಶಾಹಿಗಳ ನಗ್ನ ಶೋಷಣೆಗೆ ಒಳಪಟ್ಟಿದ್ದ ವಿವಿಧ ಪ್ರಾಂತ್ಯಗಳು ಮತ್ತು ರಾಜರುಗಳ ಅಧೀನದಲ್ಲಿದ್ದ ಪ್ರದೇಶಗಳು ಸೇರಿಸಲ್ಪಟ್ಟು 1956ರಲ್ಲಿ ಕರ್ನಾಟಕವು ರಚಿಸಲ್ಪಟ್ಟಿತು. ಇದು ಪ್ರದೇಶವಾರು ಜನಜೀವನ ಮಟ್ಟದ ತಾರತಮ್ಯಕ್ಕೆ ಮತ್ತು ಅಗತ್ಯ ಸೌಕರ್ಯಗಳಾದ ಆರೋಗ್ಯ, ವಿದ್ಯಾಭ್ಯಾಸ, ಸಂಪರ್ಕ ಒದಗಿಸುವಿಕೆಯಲ್ಲಿ ಅಪಾರ ತಾರತಮ್ಯ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿದೆ. ಈ ಪರಿಸ್ಥಿತಿ ಈಗಲೂ ಮುಂದುವರಿದಿದೆ.

2.3 : ರಾಜ್ಯಕ್ಕೆ ನಿಧಿ ಒದಗಿಸಲು ಪ್ರಸ್ತಾಪಿಸುವಾಗ 8ನೇ ಹಣಕಾಸು ನಿಯೋಗವು ಕರ್ನಾಟಕ ರಾಜ್ಯದ ಈ ಎಲ್ಲಾ ವಿಶೇಷ ಗುಣಲಕ್ಷಣಗಳನ್ನು ಗಮನದಲ್ಲಿರಿಸಿಕೊಳ್ಳಬೇಕು.

೩.೦ : ನಿಲುವು

3.1 ವರ್ಷದಿಂದ ವರ್ಷಕ್ಕೆ ರಾಜ್ಯಗಳ ಆರ್ಥಿಕ ಪರಿಸ್ಥಿತಿಗಳು ಹದಗೆಡುತ್ತಿವೆ. ಯೋಜನೇತರ ವೆಚ್ಚಗಳು ಹೆಚ್ಚಾಗುತ್ತಿವೆ. ಪರಿಣಾಮವಾಗಿ ಕೊರತಾ ಪರಿಸ್ಥಿತಿ ಉಂಟಾಗಿದೆ. ಓವರ್ ಡ್ರಾಫ್ಟ್ ನಿರಂತರವಾಗಿ ಏರುತ್ತಿದೆ. ಈಗಾಗಲೇ ಸೂಚಿಸಿದ ಪ್ರಾಕೃತಿಕ ವಿಕೋಪಗಳು ಯೋಜನಾ ವೆಚ್ಚಗಳನ್ನು ಮತ್ತಷ್ಟು ಕಡಿಮೆಗೊಳಿಸಿದೆ.

3.2 : ಆದ್ದರಿಂದ ಹಣಕಾಸು ನಿಯೋಗವು ರಾಜ್ಯಗಳ ಬೆಳವಣಿಗೆಗಳ ಬಗ್ಗೆ ಸಮಗ್ರ ದೃಷ್ಟಿಯನ್ನಿರಿಸಬೇಕು. ನಿಯೋಗವು 'ಸ್ಥಳ ಸಂಬಂಧ' ಧೋರಣೆಯನ್ನು ಕೈಬಿಟ್ಟು ವ್ಯಾಪಕ ಧೋರಣೆಯನ್ನು ಅನುಸರಿಸಬೇಕು. ರಾಜ್ಯಗಳಿಗೆ ಆಡಳಿತವನ್ನು ಸಮರ್ಥವಾಗಿ ಮತ್ತು ಸುಲಲಿತವಾಗಿ ನಡೆಸಲು ನೆರವು ನೀಡುವುದು ಹಣಕಾಸು ಸಮಿತಿಯ ಕರ್ತವ್ಯವೆಂದು ನಾವು ಪರಿಗಣಿಸುತ್ತೇವೆ.

3.3 : ಭಾರತ ಸರ್ಕಾರವು ಆದಾಯದ ಸ್ಥಿತಿಸ್ಥಾಪಕತ್ವ ಶಕ್ತಿಯನ್ನು ಹೊಂದಿದ್ದು ಇದು ಅಂತರಿಕವಾಗಿ ಮತ್ತು ಹೊರಗಿನಿಂದ ಹಣವನ್ನು ದೊಡ್ಡ ಪ್ರಮಾಣದಲ್ಲಿ ಪಡೆಯಬಹುದಾಗಿದೆ. ತುರ್ತು ಅನಿವಾರ್ಯಗಳನ್ನು ಪೂರೈಸಿಕೊಳ್ಳಲು ಇದು ಎಲ್ಲ ಹಣಕಾಸು ಸಂಸ್ಥೆಗಳನ್ನು ಹೊಂದಿದೆ. ಅಪಾರ ಮೊತ್ತದ ಹಣಕಾಸನ್ನು ಇದು ಹೊಂದಬಹುದಾಗಿದೆ.

3.4 : ನ್ಯಾಯೋಚಿತವಲ್ಲದ ರೀತಿಯಲ್ಲಿ ಕೇಂದ್ರ ಸರ್ಕಾರವು ರಾಜ್ಯಗಳ ಪಾಲಿನ ತೆರಿಗೆಗಳ ಆದಾಯವನ್ನು ನುಂಗಲು ಮುಂದಾಗುತ್ತಿದೆ. ರಾಜ್ಯಗಳ ಆದಾಯವನ್ನು ಕಿತ್ತುಕೊಳ್ಳಲು ಕೇಂದ್ರವು ಹೊಸ ಹೊಸ ಮಾರ್ಗಗಳನ್ನು ಹುಡುಕುತ್ತಿದೆ ಲಭ್ಯವಿರುವ ಹಣಕಾಸುಗಳನ್ನು ಸಮವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಂಚುವ ಸಾಧ್ಯತೆಯ ಬಗ್ಗೆ ಹಣಕಾಸು ಸಮಿತಿ ಮಾರ್ಗವನ್ನು ಸೂಚಿಸಬೇಕು.

೪.೦ : ನಿಧಿ ವಿನಿಯೋಗದ ಬಗ್ಗೆ ಸೂಚನೆಗಳು

4.1 : ಕಾರ್ಪೊರೇಷನ್ ತೆರಿಗೆಗಳು ರಾಷ್ಟ್ರದ ಬೆಳವಣಿಗೆಯ ಫಲವಾಗಿದ್ದು ಇದಕ್ಕೆ ರಾಜ್ಯಗಳು ಗಣನೀಯ ಮಟ್ಟದಲ್ಲಿ ನೆರವಾಗುತ್ತಿವೆ. ಕಳೆದ 25 ವರ್ಷಗಳಲ್ಲಿ ಈ ತೆರಿಗೆಗಳ ಮೊತ್ತ ಹಲವಾರು ಪಾಲು ಹೆಚ್ಚಾಗಿದೆ. 1958-59ರಲ್ಲಿ 54 ಕೋಟಿ ಇದ್ದದ್ದು 1983-84 ರಲ್ಲಿ ಇದು 2,282 ಕೋಟಿಗೆ ಏರಿದೆ. 1959 ರವರೆಗೆ ಇದ್ದಂತೆಯೇ ಕಾರ್ಪೊರೇಶನ್ ತೆರಿಗೆಗಳು ಹಂಚಲ್ಪಡಬೇಕಾದ ಹಣಕಾಸಿನ ಭಾಗವಾಗಬೇಕೆಂದು ಒತ್ತಾಯಿಸುವುದು ನ್ಯಾಯೋಚಿತವಾಗಿದೆ. ಈ ಬಗ್ಗೆ ಸಂವಿಧಾನದ ತಿದ್ದುಪಡಿ ಅಗತ್ಯವಾಗಿದ್ದಲ್ಲಿ ಅದನ್ನು ತ್ವರಿತವಾಗಿ ಮಾಡಬೇಕು. ಅದುವರೆಗ ರಾಜ್ಯಗಳಿಗೆ ಈ ತೆರಿಗೆಗಳ ಸರಿಸಮಾನ ವಿತರಣೆ ವ್ಯವಸ್ಥೆ ಮಾಡಬೇಕು.

4.2 : 7ನೇ ಹಣಕಾಸು ನಿಯೋಗವು ಆದಾಯ ತೆರಿಗೆಯ 85 ಶೇಕಡ ಭಾಗವು ರಾಜ್ಯಗಳ ಪಾಲಿನದ್ದಾಗಬೇಕೆಂದು ಶಿಫಾರಸ್ಸು ಮಾಡಿತ್ತು. ಇದರಲ್ಲಿ ಶೇಕಡ ನೂರರಷ್ಟು ಹಣವನ್ನು ರಾಜ್ಯಗಳಿಗೆ ನೀಡಿದರೂ ಏನೂ ತೊಂದರೆಯಾಗಲಾರದು. 8ನೇ ಹಣಕಾಸು ನಿಯೋಗವು ಇದನ್ನು ಕಡೇಯಪಕ್ಷ ಶೇಕಡ 90 ಕ್ಕಾದರೂ ಏರಿಸಲು ಶಿಫಾರಸ್ಸು ಮಾಡಬೇಕು.

4.3 : ಕೇಂದ್ರ ಸರಕಾರವು ನಿರಂತರವಾಗಿ ಆದಾಯ ತೆರಿಗೆಯ ಮೇಲೆ ಸರ್‌ಚಾರ್ಜ್ ಹಾಕುತ್ತಿದ್ದು ಇದು ತೀರಾ ಅನ್ಯಾಯದ ಕ್ರಮವಾಗಿದೆ. ಇದರಿಂದಾಗಿ ರಾಜ್ಯಗಳಿಗೆ ಆದಾಯ ತೆರಿಗೆಯಲ್ಲಿ ಶಾಸನಬದ್ಧ ಪಾಲು ಇಲ್ಲವಾಗಿದೆ. ಸರ್‌ಚಾರ್ಜನ್ನು ಕೂಡಲೇ ಆದಾಯ ತೆರಿಗೆಯೊಂದಿಗೆ ಸೇರ್ಪಡಿಸಬೇಕು. ಹಾಗು ಇದು ವಿತರಿಸಲ್ಪಡುವ ಆದಾಯದ ಭಾಗವಾಗಬೇಕು. ಆದಾಯ ತೆರಿಗೆಗೆ ನೀಡಲಾದ ಸೂಚನೆಯಂತೆ ಇದೂ ಕೂಡ ಶೇಕಡ 90 ರಷ್ಟು ಹಂಚಲ್ಪಡಬೇಕು.

4.4 : 7ನೇ ಹಣಕಾಸು ಸಮಿತಿಯು ಶಿಫಾರಸ್ಸು ಮಾಡಿರುವ 40 ಶೇಕಡದ ಬದಲಿಗೆ ಅಬಕಾರಿ ತೆರಿಗೆಯ 50 ಶೇಕಡ ಭಾಗವನ್ನು ರಾಜ್ಯಗಳಿಗೆ ವಿತರಿಸಬೇಕು.

4.5 : ಭಾರತ ಸರಕಾರವು ನವೀನ ರೀತಿಯಲ್ಲಿ ಪೆಟ್ರೋಲ್, ಕಲ್ಲಿದ್ದಲು, ಕಬ್ಬಿಣ ಮತ್ತು ಉಕ್ಕಿನ ಆಡಳಿತಾತ್ಮಕ ಬೆಲೆಗಳನ್ನು ಏರಿಸುವ ಕ್ರಮಕ್ಕೆಗೊಂಡಿದೆ. ಇದು ಒಂದು ಕಡೆ ರಾಜ್ಯ ಸರಕಾರಕ್ಕೆ ಅಬಕಾರಿ ತೆರಿಗೆಯ ಪಾಲನ್ನು ಇಲ್ಲವಾಗಿಸಿದ್ದು, ಇನ್ನೊಂದೆಡೆ ರಾಜ್ಯ ಸರಕಾರದ ಹತೋಟಿಯಲ್ಲಿರುವ ಸಾರ್ವಜನಿಕ ಉದ್ಯಮಗಳನ್ನು ನಡೆಸುವ ವೆಚ್ಚವನ್ನು ಏರಿಸಿದೆ. ಬೆಲೆ ಏರಿಸುವುದರಿಂದ ಸಂಗ್ರಹವಾದ ಹಣವನ್ನು ಕೂಡ ಅಬಕಾರಿ ತೆರಿಗೆಯಂತೆ ಹಂಚಬೇಕು.

4.6 : ನಮ್ಮ ರಾಜ್ಯದ ಮೇಲಿರುವ ಭಾರತ ಸರ್ಕಾರದ 1982-83 ನೇ ವರ್ಷದ ಸಾಲಿನ ಎಲ್ಲಾ ಸಾಲಗಳನ್ನು ವಜಾಗೊಳಿಸಬೇಕು. ಯೋಜನಾ ವೆಚ್ಚಗಳಿಗೆ ಮುಂಗಡವಾಗಿ ನೀಡುವ ಹಣವನ್ನು ಸಾಲವೆಂದು ಪರಿಗಣಿಸುವ ಈಗಿನ ಕ್ರಮವನ್ನು ತಕ್ಷಣದಿಂದ ನಿಲ್ಲಿಸಬೇಕು. ಇಂತಹ ಸಾಲಗಳಲ್ಲಿ ಶೇ. 75 ಭಾಗವನ್ನು ನೆರವೆಂದು ಪರಿಗಣಿಸಿ, ಶೇ. 25 ಸಾಲವೆಂದು ಪರಿಗಣಿಸಬೇಕು.

4.7 : ಖನಿಜಗಳ ಬೆಲೆಗನುಗುಣವಾಗಿ ಶೇ. 15 ರಷ್ಟು ರಾಯಲ್ಟಿಯನ್ನು ಗೊತ್ತುಪಡಿಸಬೇಕು.

4.8 : ರಾಜ್ಯ ಸರ್ಕಾರದ ಆದಾಯದ ಮುಖ್ಯ ಭಾಗವು ವಸ್ತುಗಳ ಮೇಲಿನ ಮಾರಾಟ ತೆರಿಗೆಯಾಗಿದೆ. ಬಟ್ಟೆ, ಸಕ್ಕರೆ, ತಂಬಾಕು ಮತ್ತು ತಂಬಾಕು ಉತ್ಪನ್ನಗಳೇ ಮೊದಲಾದ ಮುಖ್ಯ ವಸ್ತುಗಳು ಹೆಚ್ಚು ಮೊತ್ತದ ತೆರಿಗೆಯನ್ನು ಒದಗಿಸುವಂಥದ್ದಾಗಿದ್ದು ಇದನ್ನು ಹೆಚ್ಚುವರಿ ಅಬಕಾರಿ ಕರಕ್ಕೆ ಒಳಪಡಿಸಲಾಗಿದ್ದು ಈ ಮೂಲಕ ರಾಜ್ಯಗಳಿಗೆ ದಕ್ಕಬೇಕಾದ ಆದಾಯವನ್ನು ವಂಚಿಸಲಾಗಿದೆ. ಇದನ್ನು ಈ ಕೂಡಲೇ ನಿಲ್ಲಿಸಬೇಕು.

4.9 : ಇನ್ನೂ ಐದು ವಸ್ತುಗಳನ್ನು ರಾಜ್ಯದ ಪಟ್ಟಿಯಿಂದ ಕೇಂದ್ರದ ಪ್ರಭಾವಲಯಕ್ಕೆ ಬದಲಾಯಿಸುವ ಮೂಲಕ ರಾಜ್ಯದ ಆದಾಯದೊಳಕ್ಕೆ ಪ್ರವೇಶಿಸಲು ಕೇಂದ್ರಕ್ಕೆ ಅನುವು ಮಾಡಿಕೊಡುವಂತೆ ಶಿಫಾರಸು ಮಾಡಿರುವ ತ್ರಿಪಾಟಿ ಸಮಿತಿಯೊಂದಿಗೆ ನಾವು ಸಂಪೂರ್ಣವಾಗಿ ಅಸಮ್ಮತಿಯನ್ನು ವ್ಯಕ್ತಪಡಿಸುತ್ತೇವೆ.

4.10 : ಭಾರತ ಸರ್ಕಾರವು ಕೊಡುವ ಸೆಕ್ಯೂರಿಟಿಗಳ ಮೇಲೆ ಬಡ್ಡಿ ದರವು ಶೇ. 6.5 ಆಗಿದ್ದು ರಾಜ್ಯ ಸರ್ಕಾರಗಳು ಕೊಡುವ ಸೆಕ್ಯೂರಿಟಿಗಳ ಮೇಲೆ ಶೇ. 13 ರಷ್ಟು ಬಡ್ಡಿ ದರವಿರುತ್ತದೆ. ಇದನ್ನು ಶೇ. 6.5 ಕ್ಕೆ ಮಿತಗೊಳಿಸಿ, ಏಕರೂಪಗೊಳಿಸಬೇಕು.

೫.೦ : ಸಮಾರೋಪ

ಭಾರತ ಸರಕಾರದ ಆದಾಯದ ಮೂಲ ಮತ್ತು ವೆಚ್ಚಗಳ ಬಗ್ಗೆ ಅಂತೆಯೇ ರಾಜ್ಯ ಸರ್ಕಾರಗಳ ಆದಾಯ - ವೆಚ್ಚಗಳ ಬಗ್ಗೆ ವಿವರವಾಗಿ ಅಧ್ಯಯನ ನಡೆಸಲು ನಾವು 8ನೇ ಹಣಕಾಸು ನಿಯೋಗಕ್ಕೆ ಮನವಿ ಮಾಡುತ್ತೇವೆ. ಸಂವಿಧಾನದ ಪಟ್ಟಿ I ಮತ್ತು II ರಲ್ಲಿ ಉಲ್ಲೇಖಿಸಿರುವಂತೆ ಈ ಸರ್ಕಾರಗಳ ಸಂವಿಧಾನಾತ್ಮಕ ಜವಾಬ್ದಾರಿಗಳನ್ನೂ ಕೂಡ ಪರಿಶೀಲಿಸಬೇಕು. ಈ ಅಧ್ಯಯನದ ಆಧಾರದಲ್ಲಿ 8ನೇ ಹಣಕಾಸು ಆಯೋಗವು ರಾಜ್ಯ ಸರ್ಕಾರಗಳಿಗೆ ಹೆಚ್ಚು ಹಣಕಾಸನ್ನು ಒದಗಿಸಿ ಅದರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ದಾರಿಯನ್ನು ಕಂಡುಹಿಡಿಯಬೇಕು.

ಭೂ ಮಾಲೀಕರ ಪ್ರೀತಿ ಪಾತ್ರರಾಗಬೇಕೇ ಅಥವಾ...

ಜುಲೈ 29 ರಂದು ರಾಜ್ಯಸಭೆಯಲ್ಲಿ ಹರ್‌ಕಿಶನ್ ಸಿಂಗ್ ಸುರಜಿತ್‌ರವರು ವಿತರಣೆಗೆ ಹೆಚ್ಚು ಜಮೀನು ಸಿಗಲು ಸಾಧ್ಯವಾಗುವಂತೆ ಭೂ ಸುಧಾರಣಾ ಶಾಸನಗಳ ಕುಂದು ಕೊರತೆಗಳನ್ನು ನೀಗಿಸಲು ಸರಕಾರ ಏನು ಕ್ರಮ ಕೈಗೊಂಡಿದೆ ಅಥವಾ ಕೈಗೊಳ್ಳಲಿದೆ ಎಂದು ಪ್ರಶ್ನಿಸಿದಾಗ ಕೇಂದ್ರದ ಯೋಜನಾ ರಾಜ್ಯ ಮಂತ್ರಿಯವರು, 1972 ರ ನಿರ್ದೇಶನ ಸೂತ್ರಗಳ ಪ್ರಕಾರ ರೂಪಿಸಿದ ಶಾಸನಗಳು ಸುಮಾರಾಗಿ ಎಲ್ಲಾ ಕುಂದು ಕೊರತೆಗಳನ್ನು ನೀಗಿಸಿವೆ ಎಂದು ಅತ್ಯಂತ ಭರವಸೆಯಿಂದ ಉತ್ತರಿಸಿದರು.

ಆದರೆ ಅವರ ಸರಕಾರದ ಆರನೇ ಯೋಜನೆ ರೂಪಿಸಿದ ಯೋಜನಾ ಆಯೋಗದ ಪ್ರಕಾರ ಮೊದಲೇ ಅಂದಾಜು ಮಾಡಲಾಗಿದ್ದ 6.3 ಕೋಟಿ ಎಕರೆ ಹೆಚ್ಚುವರಿ ಜಮೀನಿನಲ್ಲಿ 2 ಕೋಟಿ ಎಕರೆಗಿಂತ ಜಾಸ್ತಿ ಸಿಗಲಾರದು. ಅಷ್ಟೇ ಅಲ್ಲ ಹೊಸ ಇಪ್ಪತ್ತಂಶ ಕಾರ್ಯಕ್ರಮದಲ್ಲಿ 1982-83 ರಲ್ಲಿ 11 ಲಕ್ಷ ಎಕರೆ ಜಮೀನಿನ ವಿತರಣೆಯ ಗುರಿ ಹೊಂದಿದ್ದರೆ, ವಾಸ್ತವವಾಗಿ ವಿತರಣೆಗೊಂಡದ್ದು ಕೇವಲ 3 ಲಕ್ಷ ಎಕರೆ ಅಂದರೆ ಭೂ ಸುಧಾರಣಾ ಶಾಸನಗಳಿಂದ ತಪ್ಪಿಸಿಕೊಳ್ಳುವಲ್ಲಿ ಭೂ ಮಾಲೀಕರು ಅಪಾರ ಯಶಸ್ಸುಗಳಿಸಿದ್ದಾರೆ. ಭೂ ಮಾಲೀಕರ ಪ್ರೀತಿ ಪಾತ್ರರಾಗಬಯಸುವ ಇಂಥ ಮಂತ್ರಿಗಳಿರುವಾಗ ಅವರಿಗೇಕೆ ಸೋಲಾಗಬೇಕು.

ಪಶ್ಚಿಮ ಬಂಗಾಳದ ವಿಧಾನ ಸಭೆ ಈಗಿರುವ ಶಾಸನದ ಕುಂದು ಕೊರತೆಗಳನ್ನು ನೀಗಿಸುವ ಶಾಸನವನ್ನು ಅಂಗೀಕರಿಸಿ ಕೇಂದ್ರ ಸರಕಾರಕ್ಕೆ ಎರಡು ವರ್ಷಗಳ ಹಿಂದೆ ಅನುಮತಿಗೆ ಕಳಿಸಿತ್ತು. ಅದೇ ರೀತಿ ಕೇರಳ ಹಾಗೂ ತಮಿಳುನಾಡು ವಿಧಾನ ಸಭೆಗಳೂ ಕಳಿಸಿದ್ದವು. ಇವೆಲ್ಲಾ ಇನ್ನೂ ಅನುಮತಿಗಾಗಿ ಕಾಯುತ್ತಿವೆ. ಬೇನಾಮೀ ವ್ಯವಹಾರಗಳ ಮೂಲಕ ಜಮೀನನ್ನು ಬೇರೆ ಬೇರೆ ಹೆಸರುಗಳಲ್ಲಿ ವರ್ಗಾಯಿಸಲು ಭೂ ಮಾಲೀಕರಿಗೆ ಕಾಲಾವಕಾಶ ಕೊಟ್ಟು, ಬಡ ಕೃಷಿ ಕಾರ್ಮಿಕರಲ್ಲಿ ಹಂಚಲು ಏನೂ ಉಳಿಯಬಾರದು ಎಂಬುದು ಕೇಂದ್ರ ಸರಕಾರದ ಬಯಕೆಯಿರಬೇಕು. ಹೀಗಿದೆ ಸಮಾಜವಾದದ ಮುಖವಾಡ.

ಆದ್ದರಿಂದ ಸರಕಾರಕ್ಕೆ ಆರನೇ ಯೋಜನೆ ಬೇಕೇ ಬೇಡವೇ ಎಂದು ಕೇಳಿದ ಸುರಜೀತ್‌ರವರು ಬೇಕಿದ್ದರೆ ಮಂತ್ರಿಗಳು ತಮ್ಮ ಹೇಳಿಕೆಯನ್ನು ವಾಪಸು ಪಡೆದು ಭೂಮಿತಿ ಶಾಸನಗಳ ಕುಂದು ಕೊರತೆಗಳನ್ನು ನೀಗಿಸಬಯಸುವ ಎಲ್ಲಾ ಶಾಸನಗಳಿಗೆ ಸರಕಾರ ಒಪ್ಪಿಗೆ ಕೊಡುವುದಾಗಿ ಸ್ಪಷ್ಟವಾಗಿ ಹೇಳಬೇಕೆಂದು ಒತ್ತಾಯಿಸಿದರು.

ಅಂತರಾಷ್ಟ್ರೀಯ

ಇರಾನಿನಲ್ಲಿ ಎಡವಾದಿಗಳ ಮೇಲೆ ದಾಳಿ ಏಕೆ ?

★ ಹರ್‌ಕಿಶನ್‌ಸಿಂಗ್ ಸುರ್ಜಿತ್ ★ ಭಾವಾನುವಾದ : ಕುಮಾರ್ ಕುಂದಾಪುರ

ಇರಾನಿನಲ್ಲಿ ಮಾರ್ಚ್ 1979ರಲ್ಲಿ ಅಮೇರಿಕದ ಪರವಾಗಿದ್ದ, ಅತ್ಯಂತ ಬರ್ಬರ ವ್ಯವಸ್ಥೆಯನ್ನು ತೀವ್ರ ಹೋರಾಟದ ಮೂಲಕ ಕಿತ್ತೊಗೆದಾಗ ಅದನ್ನು ಜಗತ್ತಿನ ಶಾಂತಿ ಪರವಾದ ಪ್ರಜಾಪ್ರಭುತ್ವ ಶಕ್ತಿಗಳು ದೊಡ್ಡ ಜಯವೆಂದು ಸ್ವಾಗತಿಸಿದರು. ಧಾರ್ಮಿಕ ಮುಖಂಡರುಗಳು ಚಳುವಳಿಯನ್ನು 'ಶಾ' ನ ಪ್ರಭುತ್ವದ ವಿರುದ್ಧ ಮುನ್ನಡೆಸಿದರೆ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು, ವಿದ್ಯಾರ್ಥಿಗಳು, ಕಾರ್ಮಿಕರು ಅದರಲ್ಲೂ ವಿಶೇಷವಾಗಿ ಎಣ್ಣೆ ಕಾರ್ಮಿಕರು ಹಾಗೂ ರೈತರು 'ಜನತಾ ಜಯ' ಸಾಧಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿದರು. ಫಿದಾಯಿನ್ ಗೆರಿಲ್ಲಾಗಳ ಸಂಘಟನೆಯಾದ ತುದೆ ಪಕ್ಷ ಮತ್ತು ಮುಜಾಹಿದಿನ್ ಸಂಘಟನೆಗಳು ಧಾರ್ಮಿಕ ಮುಖಂಡರುಗಳೊಂದಿಗೆ ಹೋರಾಟದಲ್ಲಿ ಮುಂದಿದ್ದವು. ಇರಾನಿನ ಜನತೆ ಅಪಾರ ತ್ಯಾಗ, ಬಲಿದಾನ ಮಾಡಬೇಕಾಗಿ ಬಂತು. ಶಾ ದೇಶ ತೊರೆದು ಪಲಾಯನ ಮಾಡುವ ಮುನ್ನ, ಆತನ ಪ್ರಭುತ್ವದಡಿಯಲ್ಲಿ ಸಾವಿರಾರು ಜನ ವಧಿಸಲ್ಪಟ್ಟಿದ್ದರು.

ಕದಡಿದ ಐಕ್ಯತೆ :

ಆದರೆ ಶಾನ ವಿರುದ್ಧ ನಡೆಸಿದ ಹೋರಾಟದ ಸಂದರ್ಭದಲ್ಲಿ ಇದ್ದ ಐಕ್ಯತೆ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಕದಡಲ್ಪಟ್ಟಿದೆ. ತುದೆ ಪಕ್ಷವೂ ಸೇರಿದಂತೆ ಎಡ ಪಕ್ಷಗಳ ಮೇಲಿನ ಧಾಳಿ, ಸೋವಿಯತ್ ರಾಯಭಾರಿಗಳ ಅವಮಾನತೂ ಇವೇ ಮೊದಲಾದ ಕ್ರಮಗಳ ಮೂಲಕ "ಇಸ್ಲಾಮಿಕ್ ಕ್ರಾಂತಿ" ಯು ಅಮೇರಿಕಾದ ಸಾಮ್ರಾಜ್ಯಶಾಹಿಗಳಿಗೆ ಮರು ಪ್ರವೇಶಕ್ಕೆ ಸಹಾಯಕವಾಗಿದೆ. ಎಡವಾದಿಗಳ ಮೇಲಿನ ದಾಳಿ ನಿರಂತರವಾಗಿದೆ. ನೂರಾರು ಜನರನ್ನು ಬಂಧಿಸಿ ಹಿಂಸಿಸಲಾಗುತ್ತಿದೆ. ಬಹಳಷ್ಟು ಮಂದಿಗೆ ಮರಣದಂಡನೆಗೆ ಗುರಿಪಡಿಸಲಾಗಿದೆ. ತುದೆ ಪಕ್ಷದ ಪ್ರಧಾನ ಕಾರ್ಯದರ್ಶಿಯಾದ 75 ವರ್ಷ ವಯಸ್ಸಿನ ಡಾ|| ನೂರುದ್ದಿನ್ ಕಿನಾರಿಯವರನ್ನು ವಧಿಸಲಾಯಿತು. ಶಾನ ಕ್ರೂರ ಪ್ರಭುತ್ವದ ವಿರುದ್ಧ ಹೋರಾಟ ನಡೆಸಿ ಗಡಿ ಪಾರಾದ ಮತ್ತು ಶಾನ ವಿರುದ್ಧದ ಕ್ರಾಂತಿಯಲ್ಲಿ ತುದೆ ಪಕ್ಷವನ್ನು ಮುನ್ನಡೆಸಿದ ಕಿನಾರಿಯಂತಹ ವ್ಯಕ್ತಿಗಳನ್ನು ಬಂಧಿಸಿ ಹಿಂಸಿಸಿ, ಕೊನೆಗೆ ಗಲ್ಲಿಗೇರಿಸಲಾಯಿತೆಂದರೆ, ಇಂದು ಇರಾನಿನಲ್ಲಿ ಯಾವುದೇ ಪ್ರಗತಿಪರ ಶಕ್ತಿಗಳ ಇರುವಿಕೆ ಮತ್ತು ಚಟುವಟಿಕೆಗೆ ಅವಕಾಶವಿಲ್ಲವೆಂದೇ ಅರ್ಥವಾಗುತ್ತದೆ.

ರಾಷ್ಟ್ರವು ಸಾಮ್ರಾಜ್ಯಶಾಹಿಗಳನ್ನು ಅವಲಂಬಿಸುವುದನ್ನು ವಿರೋಧಿಸಿ, ಜನಸಾಮಾನ್ಯರ ಬದುಕನ್ನು ಸುಧಾರಿಸಲು ಒತ್ತಾಯಿಸಿ 1969ರಲ್ಲಿ ಅಯತೊಲ್ಲ ಖೊಮೇನಿ ಪ್ರತಿ ಸವಾಲು ಹಾಕಿದಾಗ, ಆ ಧಾರ್ಮಿಕ ಮುಖಂಡರುಗಳ ಹೋರಾಟ ರಕ್ತದೋಕುಳಿಯಲ್ಲಿ ಮುಳುಗಿಸಲ್ಪಟ್ಟಿತ್ತು. ವಿರೋಧ ಪಕ್ಷಗಳ ಐಕತೆಯನ್ನು ಸಾರಿದ ಖೊಮೇನಿ ಹೋರಾಟದ ಮುಂಚೂಣಿಯಾದ.

ಶಾನು ತನ್ನ ಆಡಳಿತದ ಕಾಲದಲ್ಲಿ ಎಲ್ಲಾ ರೀತಿಯ ಚಳುವಳಿಗಳನ್ನು ಮತ್ತು ಪ್ರಜಾಪ್ರಭುತ್ವವಾದಿ ಸಂಘಟನೆಗಳನ್ನು ಹತ್ತಿಕ್ಕಿದ್ದನಾದರೂ ಧಾರ್ಮಿಕ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದ್ದ. ಈ ಹಿನ್ನೆಲೆಯಲ್ಲಿ ಮಸೀದಿ ಮತ್ತಿತರ ಧಾರ್ಮಿಕ ಕೇಂದ್ರಗಳು ಜನತೆಯನ್ನು ಒಂದೆಡೆ ಸೇರಿಸುವ ಕೇಂದ್ರಗಳಾದವು. ಇದರ ಸದುಪಯೋಗ ಪಡೆದ ಖೊಮೇನಿ ಮತ್ತು ಆತನ ಬೆಂಬಲಿಗ ಧಾರ್ಮಿಕ ವ್ಯಕ್ತಿಗಳು 1979 ರಲ್ಲಿ ಶಾನ ವಿರುದ್ಧದ ಕಾರ್ಯಾಚರಣೆಯಲ್ಲಿ ನಾಯಕರಾದರು. ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟದಲ್ಲಿ ಯಾವುದೇ ರಾಜೀ ಮನೋಭಾವಕ್ಕೆ ಒಳಗಾಗದ್ದರಿಂದ, ಎಡ ಶಕ್ತಿಗಳ ಮುಖ್ಯ ಪಾತ್ರದ ನಡುವೆಯೂ, ಧಾರ್ಮಿಕ ಮುಖಂಡರುಗಳು ಮುಖ್ಯ ಶಕ್ತಿಗಳಾದರು.

ಕ್ರಾಂತಿಯ ತಕ್ಷಣದ ಫಲಿತಾಂಶವಾಗಿ – ಶಾ ಮತ್ತು ಆತನ ಸಹಚರರು ಹೊಂದಿದ್ದ ಕಾರ್ಖಾನೆಗಳು ಮತ್ತು ತೋಟಗಳನ್ನು ಸರಕಾರ ವಶಪಡಿಸಿಕೊಂಡಿತು. ಅಮೇರಿಕ, ಬ್ರಿಟನ್, ಫ್ರಾನ್ಸ್ ಮತ್ತು ಡಚ್ ಸಂಸ್ಥೆಗಳ ಹತೋಟಿಯಲ್ಲಿದ್ದ ಎಲ್ಲಾ ಎಣ್ಣೆ ಕೈಗಾರಿಕೆಗಳನ್ನೂ, ಬ್ಯಾಂಕ್ ಮತ್ತು ವಿಮಾ ಸಂಸ್ಥೆಗಳೊಂದಿಗೆ ರಾಷ್ಟ್ರೀಕರಿಸಲಾಯಿತು. ಅಮೇರಿಕಾ ಸಂಯುಕ್ತ ಸಂಸ್ಥಾನದೊಂದಿಗಿದ್ದ ಸೈನ್ಯ ಒಪ್ಪಂದವನ್ನು ರದ್ದುಗೊಳಿಸಲಾಯಿತು ಮತ್ತು ಅಮೇರಿಕಾದ 54,000 ಸೈನಿಕ ಸಲಹೆಗಾರರನ್ನು ದೇಶದಿಂದ ಹೊರದಬ್ಬಲಾಯಿತು. ಇರಾನ್ 'ಸೆಂಟೊ' ಒಪ್ಪಂದದಿಂದ ಹೊರಬಂದು ಅಲಿಪ್ತ ಚಳುವಳಿಗೆ ಸೇರ್ಪಡೆಯಾಯಿತು.

ಸರ್ವಾಧಿಕಾರಿ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ರಂಗದಲ್ಲಿ ತಾತ್ಕಾಲಿಕವಾಗಿ ಒಂದಾಗಿಸಲ್ಪಟ್ಟಿದ್ದರೂ, ಮೊದಲಿನಿಂದಲೇ ಇಸ್ಲಾಮಿಕ್ ಕ್ರಾಂತಿಯ ವಿವಿಧ ಶಕ್ತಿಗಳನ್ನು ಒಳಗೊಂಡಿತ್ತು. ಕ್ರಾಂತಿಯ ಬೆಳವಣಿಗೆಯಾದಂತೆ, ವರ್ಗ ವೈರುದ್ಯಗಳು ತೀವ್ರವಾದಂತೆ, ವಿವಿಧ ನಿಲುವು, ಒಲವುಗಳು ಪ್ರತಿಪಾದಿಸಲ್ಪಟ್ಟವು. ಸಾಮ್ರಾಜ್ಯಶಾಹಿ ವಿರೋಧಿ ನಿಲುವು ಮತ್ತು ಪ್ರಜಾಪ್ರಭುತ್ವ ವಿರೋಧಿ ನಿಲುವು ಮತ್ತು ಪ್ರಜಾ ಪ್ರಭುತ್ವ ವಿರೋಧಿ ನಿಲುವು ಇವುಗಳೆರಡೂ ಇಸ್ಲಾಮಿಕ್ ಮೂಲಭೂತವಾದದ ಆಶ್ರಯದಲ್ಲಿ, ಆಂತರಿಕ ವರ್ಗ ವೈರುದ್ಯಗಳೊಂದಿಗೆ ಬೆಳೆಯಲಾರಂಭಿಸಿದವು.

ಸಾಮ್ರಾಜ್ಯಶಾಹಿ ಪ್ರಯತ್ನಗಳು :

ಸಾಮ್ರಾಜ್ಯಶಾಹಿಗಳು ಇರಾನಿನಲ್ಲಿ ದೊಡ್ಡ ಪರಾಭವವನ್ನು ಅನುಭವಿಸಿದ್ದಾಗ್ಯೂ ಇನ್ನೂ ಆ ಶಕ್ತಿಗಳು ಅದರ ಮೇಲೆ ವಕ್ರ ದೃಷ್ಟಿಯನ್ನಿರಿಸಿಕೊಂಡಿವೆ. ಹಲವಾರು ಸಂದರ್ಭಗಳಲ್ಲಿ ಇಂತಹ ಪ್ರಯತ್ನಗಳೂ ಕಾಣಿಸಿಕೊಂಡಿವೆ. ಇಂತಹ ಪ್ರಥಮ ಪ್ರಯತ್ನ 1982, ಏಪ್ರಿಲ್‌ನಲ್ಲಿ ಟೆಹರಾನಿನಲ್ಲಿ ಸೆರೆಹಿಡಿಯಲ್ಪಟ್ಟ ಅಮೇರಿಕಾದ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲೆಂದು ಕಳುಹಿಸಲ್ಪಟ್ಟ ಟಾಬಾಸ್ ನಿಯೋಗ. ಈ ಪ್ರಯತ್ನವು ವಿಫಲವಾಗಿ ಅದು ಅಮೇರಿಕಾದ 9 ಸೈನಿಕ ಸಾವು ಮತ್ತು ಹಲವಾರು ವಿಮಾನಗಳ ನಾಶದಲ್ಲಿ ಪರ್ಯಾವಸಾನವಾಯಿತು. ಎರಡನೆ ಪ್ರಯತ್ನ ಜುಲೈ 9, 1980ರಲ್ಲಿ ಹಾಮ್ದನ್ ಬಳಿ ಇರುವ ಇರಾನಿನ ಮುಖ್ಯ ವಾಯುದಳ ನೆಲೆಯಲ್ಲಿ ನಿಖರವಾಗಿ ಯೋಜಿಸಲ್ಪಟ್ಟಿದ್ದ ದಂಗೆಯ ಪಿತೂರಿ ಇದೂ ವಿಫಲವಾಗಿ 600ಕ್ಕೂ ಮಿಕ್ಕಿ ಸೈನ್ಯಾಧಿಕಾರಿಗಳ ಬಂಧನವಾಯಿತು. ಇಂತಹ 3ನೇ ಪ್ರಯತ್ನ 1980 ಸೆಪ್ಟೆಂಬರ್ ತಿಂಗಳಲ್ಲಿ ಆರಂಭವಾದ ಇರಾನ್ ಮತ್ತು ಇರಾಕಿನ ನಡುವಿನ ಯುದ್ಧ. ಒಂದು ಅಭಿವೃದ್ಧಿಶೀಲ ರಾಷ್ಟ್ರವನ್ನು ಇನ್ನೊಂದರ ಮೇಲೆ ಎತ್ತಿ ಕಟ್ಟುವ 'ನಿಕ್ಸನ್ ಸಿದ್ಧಾಂತ' ವೆಂದು ಹೇಳಲ್ಪಡುತ್ತಿರುವ ವಾದದ ಒಂದು ಭಾಗ ಇದಾಗಿದೆ. 3 ವರ್ಷಗಳಿಂದ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಇರಾನ್ ಆರ್ಥಿಕವಾಗಿ ತಾಂತ್ರಿಕವಾಗಿ ಕ್ಷೀಣಿಸಿದೆ. ಮಿಗಿಲಾಗಿ ಈ ಯುದ್ಧವು ಇರಾಕಿಗೆ ಇರಾನಿನ ಕ್ರಾಂತಿಯನ್ನು ರಫ್ತು ಮಾಡುವ ಪ್ರಯತ್ನವೆಂದೂ ಪ್ರಚಾರ ನಡೆಸಲು ಅವಕಾಶ ಕಲ್ಪಿಸಿತು.

ಇರಾನಿನಲ್ಲಿ ಆಡಳಿತ ರೂಢವಾಗಿರುವ ಧಾರ್ಮಿಕ ಮುಖಂಡರುಗಳಲ್ಲಿ ಹಲವಾರು ಒಳ ಪಂಗಡಗಳ ನಡುವೆ ತೀವ್ರ ಭಿನ್ನಾಭಿಪ್ರಾಯದಿಂದಾಗಿ ತಿಕ್ಕಾಟಗಳು ನಡೆಯುತ್ತಿದೆ. ಆಂತರಿಕವಾಗಿ ತೀವ್ರ ಪ್ರತಿಗಾಮಿ ಧೋರಣೆ ಅನುಸರಿಸಲಾಗುತ್ತಿದೆ. ಭೂ ಸುಧಾರಣೆಯ ಕ್ರಮವನ್ನು ಜಾರಿಗೆ ತರುವ ಬದಲು ಆಸ್ತಿಗಳ ಒಡೆತನವನ್ನು ಅದರ ಹಿಂದಿನ ಮಾಲೀಕರುಗಳಿಗೆ ಹಿಂತಿರುಗಿಸಿ ಕೊಡಲಾಗುತ್ತಿದೆ. ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಕಿತ್ತುಕೊಳ್ಳುವಂತಹ ಕಾಯಿದೆಗಳನ್ನು ಜಾರಿಗೆ ತರಲಾಗಿದೆ. ಸ್ಥಳೀಯ ಉತ್ಪಾದನೆ ತೀವ್ರವಾಗಿ ಕುಸಿದಿದ್ದು, ಬಹಳ ಗ್ರಾಹಕ ವಸ್ತುಗಳು ಮಾರುಕಟ್ಟೆಯಲ್ಲಿ ಅಲಭ್ಯವಾಗಿವೆ. ಲಾಭ ಬಡುಕತನ, ಕೃತ್ರಿಮ ಬೆಲೆ ಏರಿಕೆ, ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆ, ವಸತಿ ಹೀನತೆ ಮೊದಲಾದವುಗಳು ಜನತೆಗೆ ಅಪರಿಮಿತ ಸಂಕಷ್ಟಗಳನ್ನೊಡ್ಡಿವೆ.

ಆಳುವ ವರ್ಗದೊಳಗಿನ ಕಲಹ ತೀವ್ರವಾಗುತ್ತಿದ್ದಾಗ್ಯೂ ಸ್ಥಾಪಿತ ಹಿತಾಸಕ್ತಿಗಳು ತಮ್ಮ ಹಿಡಿತವನ್ನು ಭದ್ರಪಡಿಸಿಕೊಂಡಿವೆ. ಭೂ ಸುಧಾರಣೆಯಂತಹ ಕ್ರಮಗಳು ಕೇವಲ ಕಣ್ಣೊರೆಸುವ ತಂತ್ರವಾಗಿ ಜಾರಿಗೊಳಿಸಲಾಗಿದೆ. ಇಸ್ಲಾಮಿಕ್ ಪರಿಮಿತಿಯೊಳಗೆ ಇಮಾಮರ ಅಂತಿಮ ತೀರ್ಮಾನಕ್ಕೆ ಒಳಪಟ್ಟು ಜ್ಯಾರಿಗೊಳಿಸಲ್ಪಟ್ಟಿರುವ ಭೂ ಮಸೂದೆ ಕಾನೂನು ಉಳ್ಳವರ ಆಸ್ತಿ ರಕ್ಷಣೆಗೇನೂ ಬಾಧಕವಾಗಿಲ್ಲ. ಕಾರ್ಮಿಕರ ಕನಿಷ್ಟ ಕೂಲಿಯೂ ಸೇರಿದಂತೆ ಪ್ರತಿಯೊಂದಕ್ಕೂ ಇಮಾಮರೇ ನಿರ್ಣಯಿಸುವ ಇಸ್ಲಾಮಿಕ್ 'ಮಿತಿ' ಹೇರಲಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಯಾವುದೇ ಮೂಲಭೂತ ಬದಲಾವಣೆಗಳು ಉಂಟಾಗಿಲ್ಲ. ಇರಾನಿನಲ್ಲಿ ಇಂದಿಗೂ ಪ್ರತಿಗಾಮಿಗಳು ತಮ್ಮ ಸಾಮಾಜಿಕ ಹಿಡಿತ ಸಾಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಶಾನ ಬೆಂಬಲಿಗರ ಅವಸಾನವಾಗಿದ್ದರೂ, ಈಗಲೂ ಅಮೇರಿಕ ಪರವಾದ ನಿಲುವಿನ ಜನರ ಕೊನೆಯಾಗಿಲ್ಲ. ಕ್ರಾಂತಿಯ ಸಮಯದಲ್ಲಿ ತೆಪ್ಪಗಿದ್ದವರು ಈಗ ಇಸ್ಲಾಮಿಕ್ ಕ್ರಾಂತಿಯನ್ನು ಉಳಿಸುವ ಬೆಳೆಸುವ ವೇಷದಲ್ಲಿ ಕ್ರಿಯಾಶೀಲರಾಗುತ್ತಿದ್ದಾರೆ. ಎಡ ಶಕ್ತಿಗಳ ಮೇಲೆ ಮತ್ತು ಸಮಾಜವಾದಿ ರಾಷ್ಟ್ರಗಳ ಮೇಲೆ ಕೆಟ್ಟ ಭಾವನೆ ಬೆಳೆಯಗೊಡಲಾಗುತ್ತಿದ್ದು, ತುದೆ ಪಕ್ಷದ ಮೇಲಿನ ದಾಳಿ ಮತ್ತು ಪ್ರಗತಿಪರ ನಾಯಕರ ವಧೆಯು ಇದರ ಪರಿಣಾಮವಾಗಿದೆ.

ತುದೆ ಪಕ್ಷ ಮತ್ತು ಫೆದಾಯಿದಿನ್ ಗೆರಿಲ್ಲಾ ಸಂಘಟನೆಯಾದ ಮುಜಾಹಿದಿನ್ ಮೂಲಕ ಪ್ರತಿನಿಧಿಸಲ್ಪಟ್ಟಿದ್ದ ಎಡಸಂಘಟನೆಗಳು ಅಪರಿಮಿತ ತ್ಯಾಗ ಬಲಿದಾನಗಳಿಂದ ಶಾನ ಪ್ರಭುತ್ವದ ವಿರುದ್ಧ ಹೋರಾಟ ನಡೆಸಿದ್ದಾಗ್ಯೂ ಅಲ್ಲಿನ ಪರಿಸ್ಥಿತಿಯ ಬಗ್ಗೆ ಮತ್ತು ವರ್ಗಶಕ್ತಿಗಳ ಬಗ್ಗೆ ಸರಿಯಾಗಿ ವಿಮರ್ಶಿಸದೇ ಇದ್ದದ್ದು ದುರದೃಷ್ಟದ ವಿಚಾರ. ಈ ಹಿಂದೆ ಉಲ್ಲೇಖಿಸಿದಂತೆ ಇರಾನ್ ಕ್ರಾಂತಿಯು ಎರಡು ವಿಚಾರಗಳನ್ನು ಒಳಗೊಂಡಿದೆ, ಮೊದಲನೆಯದು ಅದರ ಸಾಮ್ರಾಜ್ಯಶಾಹಿ ವಿರೋಧಿ ನಿಲುವು ಮತ್ತು ಎರಡನೆಯದು ಅದರ ಪ್ರಜಾಪ್ರಭುತ್ವ ವಿರೋಧಿ ನಿಲುವು. ಇರಾನನ್ನು ತನ್ನ ಭದ್ರ ನೆಲೆಯಾಗಿ ಉಪಯೋಗಿಸಿಕೊಳ್ಳುತ್ತಿದ್ದ ಅಮೇರಿಕಾ ಸಾಮ್ರಾಜ್ಯಶಾಹಿಗಳಿಗೆ ಮರಣಾಂತಿಕ ಹೊಡೆತ ನೀಡಿದ ಇರಾನಿನ ಕ್ರಾಂತಿಯನ್ನು ಜಗತ್ತಿನ ಜನತೆ ಬಹುವಾಗಿ ಮೆಚ್ಚಿಕೊಂಡಿರುತ್ತಾರೆ. ಆದರೆ ಕ್ರಾಂತಿಯ ನಂತರದ ಇನ್ನೊಂದು ವಿಚಾರ ಅದು ಅನುಸರಿಸುತ್ತಿರುವ ಇಸ್ಲಾಮಿಕ್ ಮೂಲಭೂತವಾದ; ಅದರಲ್ಲೂ ವಿಶೇಷವಾಗಿ ಇರಾನ್–ಇರಾಖ್ ಯುದ್ಧದ ನಂತರ ಇದು ಹೊರ ಹೊಮ್ಮಿರುವ ರೀತಿ ಆತಂಕಕಾರಿಯಾಗಿದೆ.

ಇಸ್ಲಾಂನ ಹೆಸರಿನಲ್ಲಿ ಮಹಿಳೆಯರ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ, ಘೋಷ ಪದ್ಧತಿ ಜಾರಿಗೆ ತರಲಾಗಿದೆ. ಕುರ್ದ್ ರಾಷ್ಟ್ರೀಯ ಸಮಸ್ಯೆಗೆ ಇನ್ನೂ ಪರಿಹಾರ ಕಂಡುಹಿಡಿಯಲಾಗಿಲ್ಲ. ಭೂ ಸುಧಾರಣೆ, ಭಾರತ ದೇಶದಂತೆ, ಕೇವಲ ಘೋಷಣೆಯಾಗಿ ಉಳಿದಿದೆ. ವಿನಹ ಹಳ್ಳಿಗಾಡು ಪ್ರದೇಶಗಳಲ್ಲಿ ಪ್ರತಿಗಾಮಿಶಕ್ತಿಗಳ ಸಾಮಾಜಿಕ ತಳಪಾಯವನ್ನು ಇಲ್ಲವಾಗಿಸುವ ಕ್ರಾಂತಿಕಾರಿ ಅಸ್ತ್ರವನ್ನಾಗಿ ಉಪಯೋಗಿಸಲಾಗಿಲ್ಲ.

ಮುಜಾಹಿದಿನ್ ಈ ಪ್ರಜಾಪ್ರಭುತ್ವ ವಿರೋಧಿ ನಿಲುವನ್ನು ಮಾತ್ರ ಗುರುತಿಸಿದರೇ ವಿನಾಃ ಕ್ರಾಂತಿಯು ವಹಿಸಿದ ಸಾಮ್ರಾಜ್ಯಶಾಹಿ ವಿರೋಧಿ ನಿಲುವನ್ನು ಪರಿಗಣಿಸಲೇ ಇಲ್ಲವಾದ್ದರಿಂದ ಅದು ಅವರನ್ನು ಸಾಮ್ರಾಜ್ಯಶಾಹಿ ಶಕ್ತಿಗಳ ತೊಳ್ತೆಕ್ಕೆಗೆ ಬೀಳುವಂತೆ ಮಾಡಿತು. ಆಂತರಿಕವಾಗಿ ರಾಷ್ಟ್ರದಲ್ಲಿ ಖೊಮೇನಿ ಆಡಳಿತದಲ್ಲಿರುವ ಕೆಲವಾರು ಪ್ರಗತಿಪರರ ಮೇಲೆ ಇವರು ಬೆಂಕಿಕಾರುತ್ತಿದ್ದು, ಕೆಲವರನ್ನು ಕೊಲೆ ಕೂಡ ಮಾಡಲಾಗಿದೆ. ಬಹಳಷ್ಟು ಜನರು ಖೊಮೇನಿ ಆಡಳಿತದಲ್ಲಿ ವಿಚಾರಣೆ ಇಲ್ಲದೆಯೇ, ಕಾರಣವಿಲ್ಲದೇನೇ ಜೀವವನ್ನು ಕಳೆದುಕೊಂಡಿರುತ್ತಾರೆ. ಸಹಜವಾಗೇ ಅವರು ಇರಾನಿನ ಬಹುಪಾಲು ಜನರ ದೃಷ್ಟಿಯಿಂದ ಪ್ರತ್ಯೇಕಿಸಲ್ಪಟ್ಟಿದ್ದಾರೆ.

ಫೆದಾಯಿನ್ ಗೆರಿಲ್ಲಾಗಳ ಸಂಘಟನೆ ಎರಡಾಗಿ ಒಡೆದು 'ಮೆಜಾರಿಟಿ' ಮತ್ತು 'ಮೈನಾರಿಟಿ' ಎಂದಾಯಿತು. 'ಮೆಜಾರಿಟಿ'ಯು ತುದೆ ಪಕ್ಷಕ್ಕೆ ಸಮೀಪವಾಯಿತು. 'ಮೈನಾರಿಟಿ'ಯು ಸಮಾಜವಾದಿ ಕ್ರಾಂತಿಗೆ ಕರೆನೀಡಿತು. ಮತ್ತು ಪ್ರತ್ಯೇಕವಾಗಿ ಉಳಿವ ನಿಲುವನ್ನು ಅನುಸರಿಸಿತು. ಕ್ರಾಂತಿಯಲ್ಲಿ ವರ್ಗಮಿತ್ರತ್ವದ ಧೋರಣೆಯ ಪಾತ್ರಕ್ಕೆ ಮಹತ್ವನೀಡಲಿಲ್ಲ, ಮುಜಾಹಿದಿನ್ ಮತ್ತು ತುದೆ ಪಕ್ಷಗಳನ್ನು ಇದು ವಿರೋಧಿಸಿತು. 'ಮೆಜೋರಿಟಿ' ಅಂತಿಮವಾಗಿ ತುದೆ ಪಕ್ಷದೊಂದಿಗೆ ಐಕ್ಯಗೊಂಡಿತು.

ಫೆದಾಯಿನ್ ಮೆಜಾರಿಟಿ ಮತ್ತು ತುದೆ ಪಕ್ಷ ಕೂಡ ಇರಾನ್‌ಕ್ರಾಂತಿಯು ವಹಿಸಿದ ಸಾಮ್ರಾಜ್ಯಶಾಹಿ ವಿರೋಧಿ ನಿಲುವನ್ನು ಶ್ಲಾಘಿಸಿದರೂ ಅಯತೊಲ್ಲಾ ಖೊಮೇನಿಯು ಸಾಮಾಜಿಕ ಪರಿವರ್ತನೆ ಮಾಡುತ್ತಾನೆಂಬ ಹುಸಿ ಆಶಯವನ್ನು ಇರಿಸಿಕೊಂಡಿತ್ತು. ಇಂದಿನ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಸುಧಾರಣೆಗಳನ್ನು ಕೂಡ ಕಾರ್ಮಿಕ ವರ್ಗದ ನಾಯಕತ್ವ ಇಲ್ಲದೆ ಜಾರಿಗೆ ತರಲು ಸಾಧ್ಯವಿಲ್ಲ ಎಂಬ ಮೊದಲನೆಯ ವಿಚಾರ, ಇಸ್ಲಾಂ ಮೂಲಭೂತವಾದದ ಹೆಸರಿನಲ್ಲಿ ಕೆಲಸ ನಿರ್ವಹಿಸುವ ಪಕ್ಷಗಳು ಒಂದು ಹಂತದಲ್ಲಿ ಸಾಮ್ರಾಜ್ಯಶಾಹಿಗಳ ವಿರೋಧಿ ಹೋರಾಟದಲ್ಲಿ ಸಹಾಯಕರವಾಗಬಹುದಾದರೂ, ಅವರ ಇತಿಮಿತಿಗಳಿಂದಾಗಿ ಅವರು ನಿರಂತರವಾಗಿ ಹೋರಾಟ ಮುಂದುವರಿಸಲು ಸಾಧ್ಯವಿಲ್ಲ–ಎಂಬ ಎರಡನೆಯ ವಿಚಾರ–ಈ ಎರಡು ವಿಚಾರಗಳನ್ನು ಅರ್ಥೈಸಿಕೊಳ್ಳುವಲ್ಲಿ ಅವರು ವಿಫಲರಾದರು. ಈ ವಿಚಾರಗಳನ್ನು ಅರ್ಥೈಸಿಕೊಳ್ಳುವಲ್ಲಿ ಉಂಟಾದ ಸೋಲು ತುದೆ ಪಕ್ಷ ಮತ್ತು ಫೆದಾಯಿನ್ ಮೆಜಾರಿಟಿಯನ್ನು ಈಗಿನ ಗೊಂದಲಕ್ಕೆ ತಳ್ಳಿದೆ. ಒಂದು ವರ್ಷದ ಹಿಂದೆ ಅವರ ಪಕ್ಷದ ಕಚೇರಿಗಳ ಮೇಲೆ ನಡೆದ ದಾಳಿ ಮತ್ತು ಅವರ ಪತ್ರಿಕೆಯ ಪ್ರಚೋದಿಸಿ

(ಆರನೇ ಪುಟ ನೋಡಿ)

ಶ್ರೀಲಂಕಾ ಪರಿಸ್ಥಿತಿಯ ಬಗ್ಗೆ DYFI ಕೇಂದ್ರ ಸಮಿತಿಯ ಪತ್ರಿಕಾ ಹೇಳಿಕೆ

ಶ್ರೀಲಂಕಾದಲ್ಲಿ ಇತ್ತೀಚೆಗೆ ನಡೆದ ಧಾರುಣ ಘಟನೆಯು ಶ್ರೀಲಂಕಾದ ಬೂರ್ಜ್ವಾ–ಬಂಡವಾಳಶಾಹಿ ಸರ್ಕಾರವು ಜನತೆಯನ್ನು ಭಾಷೆ, ಪ್ರಾಂತ್ಯ ಮತ್ತು ಜಾತಿಗಳ ಆಧಾರದ ಮೇಲೆ ಒಡೆದು ತಾನು ಅಧಿಕಾರದಲ್ಲಿ ಮುಂದುವರೆಯುತ್ತಿರುವುದನ್ನು ತೋರಿಸುತ್ತದೆ.

ಶ್ರೀಲಂಕಾ ಅಧ್ಯಕ್ಷರು ಎಡಪಕ್ಷಗಳನ್ನು ನಿಷೇಧಿಸುವುದರ ಮೂಲಕ ಶ್ರೀಲಂಕಾದಲ್ಲಿ ಶಾಂತಿಯುತ ವಾತಾವರಣ ಉಂಟುಮಾಡಲು ಶ್ರಮಿಸುತ್ತಿದ್ದ ಪಕ್ಷಗಳ ಬೆಂಬಲವನ್ನು ಕಳೆದುಕೊಂಡಿದ್ದಾರಲ್ಲದೆ ಅಮೇರಿಕಾ ಮತ್ತು ಬ್ರಿಟನ್ ದೇಶಕ್ಕೆ ಅವರು ಮಾಡಿಕೊಂಡಿರುವ ಮನವಿ ಶ್ರೀಲಂಕಾದ ಪರಿಸ್ಥಿತಿಯು ಇನ್ನೂ ಅಧೋಗತಿಗಿಳಿಯುವಂತೆ ಮಾಡುತ್ತಿದೆ. ಈ ಎರಡೂ ದೇಶಗಳು ದಕ್ಷಿಣ ಆಫ್ರಿಕಾ ಮತ್ತು ಇಸ್ರೇಲ್‌ನಲ್ಲಿ ಉಂಟುಮಾಡಿರುವ ಜನಾಂಗೀಯ ದ್ವೇಷಗಳು ಪ್ರಪಂಚದಲ್ಲಿ ಯುದ್ಧ ಭೀತಿಯನ್ನು ಹರಡಲು ಮತ್ತು ಅಧಿಪತ್ಯವನ್ನು ವಹಿಸಲು ನೀಡುತ್ತಿರುವ ಬೆಂಬಲವಾಗಿದೆ. ಶ್ರೀಲಂಕಾ ಸರ್ಕಾರವು ಪಾಕೀಸ್ಥಾನ ಮತ್ತು ಬಾಂಗ್ಲಾ ದೇಶಗಳಿಗೆ ಮಾಡಿಕೊಂಡಿರುವ ಮನವಿ ಶ್ರೀಲಂಕಾದ ಅಧ್ಯಕ್ಷರು ಪ್ರಜಾಪ್ರಭುತ್ವ ಮೌಲ್ಯಗಳನ್ನು ಅಧೋಗತಿಗೆ ತಳ್ಳಿರುವುದರ ಅತ್ಯುತ್ತಮ ಉದಾಹರಣೆಯಾಗಿದೆ.

ಶ್ರೀಲಂಕಾದ ಈ ಅನುಭವವು ಅಧ್ಯಕ್ಷೀಯ ಮಾದರಿಯ ಸರ್ಕಾರವು ಉಂಟುಮಾಡುವ ವಿಚಿತ್ರ ಪರಿಸ್ಥಿತಿಗಳನ್ನು ಸೂಚಿಸುತ್ತದೆ. ಬಂಧನದಲ್ಲಿರುವ ಕೈದಿಗಳನ್ನು ರಕ್ಷಿಸಲು, ಸಿಂಗಾಲಿ ಮಿಲಿಟರಿ ಭಾಷಾವಾದಿಗಳಿಂದ ದೇಶವನ್ನು ರಕ್ಷಿಸಲು ಮತ್ತು ಜಾತಿ, ಭಾಷೆ ಮತ್ತು ಪ್ರಾಂತ್ಯವಾದಿಗಳಿಂದ ದೇಶದ ಸಮಗ್ರತೆಯನ್ನು ಕಾಪಾಡುವಲ್ಲಿ ಅಧ್ಯಕ್ಷರು ವಿಫಲರಾಗಿದ್ದಾರೆ. ಶ್ರೀಲಂಕಾದ ಈ ಅನುಭವವು ಭಾರತದಲ್ಲಿ ಅಧ್ಯಕ್ಷೀಯ ಮಾದರಿ ಸರ್ಕಾರವನ್ನು ತರಲು ಪ್ರಯತ್ನಿಸುತ್ತಿರುವ ಶಕ್ತಿಗಳಿಗೆ ಒಳ್ಳೆಯ ಪಾಠವಾಗುತ್ತದೆ.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ ಕೇಂದ್ರ ಸಮಿತಿಯು ಎಲ್ಲಾ ಪ್ರಜಾಪ್ರಭುತ್ವವಾದಿ ವಿದ್ಯಾರ್ಥಿ ಮತ್ತು ಯುವಜನರಲ್ಲಿ ಶ್ರೀಲಂಕಾದ ಸಮಗ್ರತೆಯನ್ನು ಕಾಪಾಡಲು ಮತ್ತು ಶಾಂತ ವಾತಾವರಣವನ್ನುಂಟುಮಾಡಲು ಎಲ್ಲ ರೀತಿಯ ಬೆಂಬಲ ನೀಡಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತದೆ. ಅಮೇರಿಕಾ ಮತ್ತು ಬ್ರಿಟನ್ ದೇಶಗಳು ಶ್ರೀಲಂಕಾದಲ್ಲಿ ಪ್ರವೇಶಿಸುವುದರ ವಿರುದ್ಧವೂ ಎಲ್ಲರೂ ಎಚ್ಚೆತ್ತುಕೊಳ್ಳಬೇಕೆಂದು ಮತ್ತು ಶ್ರೀಲಂಕಾದ ಎಡಪಕ್ಷಗಳನ್ನು ನಿಷೇಧಿಸುವುದರ ವಿರುದ್ಧ ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ಕಾಪಾಡಲು ಹೋರಾಡಬೇಕೆಂದು ಮನವಿ ಮಾಡಿಕೊಳ್ಳುತ್ತದೆ.

ಇರಾನಿನಲ್ಲಿ ಎಡವಾದಿಗಳ ಮೇಲೆ ದಾಳಿ ಏಕೆ ?

(ಐದನೇ ಪುಟದಿಂದ)

ಯನ್ನು ನಿಲ್ಲಿಸಲಾಗಿದ್ದಾಗ್ಯೂ ಅವರಿಗೆ ಇಸ್ಲಾಮಿಕ ಕ್ರಾಂತಿಯಲ್ಲಿ ಆಗುತ್ತಿರುವ ವಿವಿಧ ಬೆಳವಣಿಗೆಗಳನ್ನು ಗುರುತಿಸಲು ಮತ್ತು ಆಳುವ ವರ್ಗ ಸಾಮ್ರಾಜ್ಯಶಾಹಿಗಳತ್ತ ವಾಲುತ್ತಿರುವುದನ್ನು ಗುರುತಿಸಲು ಸಾಧ್ಯವಾಗಲಿಲ್ಲ.

ಆರಂಭದಲ್ಲಿ ಸಾಮ್ರಾಜ್ಯಶಾಹಿಗಳಿಗೆ, ಮತ್ತು ಶಾನ ಸರ್ವಾಧಿಕಾರಿ ಪ್ರಭುತ್ವಕ್ಕೆ ವಿರೋಧವಾಗಿ ಒಂದು ಒಕ್ಕೂಟದ ರಂಗವು ಬೆಳೆದು ಬಂತು. ಜನರಲ್ಲಿ ಪ್ರಜಾಪ್ರಭುತ್ವ ಜಾಗೃತಿ ಬೆಳೆಸುವುದು ಮತ್ತು ಸಾಮಾಜಿಕ ಬದಲಾವಣೆ ಮಾಡುವುದರ ಪ್ರಾಮುಖ್ಯತೆಯನ್ನು ತಿಳಿಸುವುದು ಹಾಗು ಪ್ರಚಾರ ಮತ್ತು ಹೋರಾಟಗಳಿಂದ ವರ್ಗಶಕ್ತಿಗಳಲ್ಲಿ ಬದಲಾವಣೆ ತರುವುದು ಅಗತ್ಯವಾಗಿತ್ತು. ಆ ಸಂದರ್ಭದಲ್ಲಿ ಇಮಾಮರಿಗೆ ಪರವಾಗಿದ್ದ ದೂರಾಲೋಚನೆಯ ವ್ಯಕ್ತಿಗಳ ಬೆಂಬಲ ಪಡೆಯಲು ಸಾಧ್ಯವಿತ್ತು. ಈ ವಿಚಾರಕ್ಕೆ ಸಾಕಷ್ಟು ಗಮನ ನೀಡದೇ ಇದ್ದುದರಿಂದ, ಟುಡೆ ಪಕ್ಷ ಮತ್ತು ಎಡವಾದಿಗಳ ಮೇಲೆ ದಾಳಿ ನಡೆದಾಗ ಮತ್ತು ಇರಾನಿನ ಪ್ರತಿಗಾಮಿಗಳ ವಿರುದ್ಧ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧ ನಿರಂತರ ಹೋರಾಟ ನಡೆಸಿದ ವ್ಯಕ್ತಿಗಳಿಗೆ ಮರಣದಂಡನೆಯಾದಾಗ ಇರಾನಿನಲ್ಲಿ ಇದನ್ನು ಖಂಡಿಸಿ ತೀವ್ರ ಪ್ರತಿಭಟನಾ ಧ್ವನಿ ಮೊಳಗಲಿಲ್ಲ. ಜಗತ್ತಿನಲ್ಲಿ ಕಾರ್ಮಿಕ ವರ್ಗದ ಪರವಾಗಿ ಶಕ್ತಿಗಳು ಬೆಳೆದು ಬರದಿದ್ದಲ್ಲಿ ಯಾವುದೇ ಕ್ರಾಂತಿಯು ಮುನ್ನಡೆ ಸಾಧಿಸಿಲ್ಲ. ಕಾರ್ಮಿಕ ವರ್ಗ ಸ್ವತಂತ್ರವಾಗಿ ಪಾತ್ರವನ್ನು ನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ ಮತ್ತು ಸೂಕ್ಷ್ಮವಾಗಿ ಪರಿಸ್ಥಿತಿಯ ಬೆಳವಣಿಗೆ ಬಗ್ಗೆ ಗಮನ ನೀಡದಿದ್ದ ಕಾರಣ ಕೆಲವಾರು ರಾಷ್ಟ್ರಗಳಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳು ಮರುಪ್ರವೇಶ ಪಡೆಯಲು ಸಾಧ್ಯವಾಗಿದೆ.

ಇಂದಿನ ಪರಿಸ್ಥಿತಿಯಲ್ಲಿ ಇರಾಕ್ ಅಲಿಪ್ತ ಚಳುವಳಿಯ ಅಥವಾ ಇಸ್ಲಾಮಿಕ್ ಸಮ್ಮೇಳನದ ಒಪ್ಪಂದಕ್ಕೆ ಒಪ್ಪಿಗೆ ನೀಡಲು ಸಿದ್ಧವಿರುವಾಗ ಮತ್ತು ಇರಾನಿನ ಪ್ರದೇಶಗಳ ಐಕ್ಯತೆ ಖಾತರಿಯಾಗಿರುವಾಗ — ಯುದ್ಧದ ಮುಂದುವರಿಕೆಯು ಇರಾನಿನ ಒಳಗಿನ ಪ್ರತಿಗಾಮಿಗಳಿಗೆ ಮತ್ತು ಹೊರಗಿನ ಸಾಮ್ರಾಜ್ಯ ಶಕ್ತಿಗಳಿಗೆ ಮಾತ್ರ ಸಹಾಯಕವಾಗಬಲ್ಲುದು. ಇದು ಸಾಮ್ರಾಜ್ಯಶಾಹಿಗಳ ಮತ್ತು ಅಮೇರಿಕದ ಸಾಮ್ರಾಜ್ಯಶಾಹಿ ಯತ್ನಕ್ಕೆ ಆಹಾರ ಒದಗಿಸುವ ಮೂಲಕ ಈ ಶಕ್ತಿಗಳು ಇರಾನಿನ ಒಳಗೆ ನುಸುಳಲು ಅವಕಾಶ ಒದಗಿಸಿದೆ. ಕುಸಿದಿರುವ ಇರಾನಿನ ಆರ್ಥಿಕ ಪರಿಸ್ಥಿತಿ, ಯುದ್ಧದಲ್ಲಿ ಇರಾನ್ ಅನುಭವಿಸಿರುವ ಅಪಾರ ನಷ್ಟ, ಶಾನ ವಿರುದ್ಧದ ಹೋರಾಟದ ಸಂದರ್ಭದಲ್ಲಿ ಇದ್ದ ಐಕ್ಯತೆಯಲ್ಲಿ ಉಂಟಾಗಿರುವ ಬಿರುಕು ಮತ್ತು ಇಸ್ಲಾಂ ಮೂಲಭೂತವಾದವನ್ನೇ ಸರಕಾರದ ಮೇಲೆ ಹೇರುತ್ತಿರುವ ಧರ್ಮಾಧಿಕಾರಿಗಳು — ಈ ಎಲ್ಲಾ ಹಿನ್ನೆಲೆಯಲ್ಲಿ ಇರಾನಿನಲ್ಲಿ ಪುರೋಗಾಮಿ ಶಕ್ತಿಗಳ ಮೇಲೆ ಏಕೆ ದಾಳಿ ನಡೆಯುತ್ತಿದೆ ಎನ್ನುವುದನ್ನು ಅರ್ಥೈಸಬಹುದು.

ಇರಾನಿನಲ್ಲಿ ಪ್ರಜಾಪ್ರಭುತ್ವ ಅಭಿಪ್ರಾಯ ಮೂಡಿಸುವುದು ಮಾತ್ರವಲ್ಲದೆ ಎಲ್ಲಾ ಅಲಿಪ್ತ ರಾಷ್ಟ್ರಗಳ ಜನತೆ ಹಾಗು ಸಮಾಜವಾದಿ ರಾಷ್ಟ್ರಗಳು ಈ ಯುದ್ಧವನ್ನು ಕೊನೆಗೊಳಿಸಲು ಎಲ್ಲಾ ಪ್ರಯತ್ನ ಮಾಡಬೇಕು. ಇರಾನಿನ ಎಡ ಶಕ್ತಿಗಳು ತಮ್ಮ ಅನುಭವದಿಂದ ಪಾಠ ಕಲಿತು ತಮ್ಮ ಶಕ್ತಿಗಳನ್ನು ಪುನರ್ ಸಂಘಟಿಸುವಂತಹ ಮಾರ್ಗವನ್ನು ಕಂಡುಕೊಂಡು ಸಾಮ್ರಾಜ್ಯಶಾಹಿ ಶಕ್ತಿಗಳ ಪಿತೂರಿಯ ವಿರುದ್ಧ ಮತ್ತು ಇವರೊಂದಿಗೆ ಶಾಮೀಲಾಗುತ್ತಿರುವ ಧರ್ಮಾಧಿಕಾರಿಗಳ ಮತ್ತು ಸ್ಥಾಪಿತ ಹಿತಾಶಕ್ತಿಗಳ ವಿರುದ್ಧ ಹೋರಾಟ ನಡೆಸಬೇಕು. ಕಿನಾರಿ ಮತ್ತಿತರರನ್ನು ಮರಣದಂಡನೆಗೆ ಗುರಿಪಡಿಸಿದನ್ನು ಜಗತ್ತಿನ ಎಲ್ಲಾ ಪ್ರಗತಿಪರ ಶಕ್ತಿಗಳು ಖಂಡಿಸಿದ್ದಾರೆ. ಅದರೆ ಇವರ ಜೀವನ ಮತ್ತು ಕೆಲಸ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಬದಲಾವಣೆಗಾಗಿ ಹೋರಾಟ ನಡೆಸುತ್ತಿರುವ ಎಲ್ಲಾ ಇರಾನಿಯರಿಗೆ ಸ್ಫೂರ್ತಿ ನೀಡಬೇಕು.

ಪಶ್ಚಿಮ ಬಂಗಾಳ ದೂರದರ್ಶನದ ದುರುಪಯೋಗಕ್ಕೆ ಪ್ರತಿಭಟನೆ

ದಿಲ್ಲೀ ದೂರದರ್ಶನ ಜುಲೈ 29ರ ಸಂಜೆಯ ಹಿಂದೀ ವಾರ್ತಾ ಪ್ರಸಾರದಲ್ಲಿ ಒಂದು ದುರುದ್ದೇಶ ಪೂರಿತ ಹಾಗೂ ಆಧಾರಹೀನ ಸುದ್ದಿಯನ್ನು ಪ್ರಸಾರ ಮಾಡಿತ್ತು. ಪಶ್ಚಿಮ ಬಂಗಾಲದ ನಾಡಿಯಾದಲ್ಲಿ ಸಿ. ಪಿ. ಐ. (ಎಂ) ಕಾರ್ಯಕರ್ತರ ಹಲ್ಲೆಗೊಳಗಾದನೆಂದು ಹೇಳಲಾದ ರಂಜನ್ ಭಟ್ಟಾಚಾರ್ಯ ಎಂಬಾತ ಡಾ. ರಾಜೇಂದ್ರ ಪ್ರಸಾದ್ ನೇತ್ರ ಚಿಕಿತ್ಸಾ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಆತನನ್ನು ಪಶ್ಚಿಮ ಬಂಗಾಳದ ಕಾಂಗ್ರೆಸ್ (ಐ) ಅಧ್ಯಕ್ಷರು ಕಾಂಗ್ರೆಸ್ (ಐ) ಕಾರ್ಯಕರ್ತನೆಂದು ಹೇಳಿದ್ದಾರೆಂಬುದು ಆ ಸುದ್ದಿ.

ನಿಜ ಘಟನೆಯೇನೆಂದರೆ ನಾಡಿಯಾ ಜಿಲ್ಲೆಯ ದತ್ತ ಫುಲಿಯಾ ಗ್ರಾಮದ ರಂಜನ್ ಭಟ್ಟಾಚಾರ್ಯ, ಆ ಗ್ರಾಮದ ಇನ್ನೊಬ್ಬಾತನ ಮೇಲೆ ಆತನ ಮಗ ಹಾಗೂ ಗರ್ಭಿಣಿ ಮಗಳ ಮೇಲೆ ಹಲ್ಲೆ ನಡೆಸಿ ಅವರನ್ನು ತೀವ್ರವಾಗಿ ಗಾಯಗೊಳಿಸಿದುದಕ್ಕೆ ಪ್ರತಿಯಾಗಿ ಇತರ ಹಳ್ಳಿಗರು ಹಲ್ಲೆ ನಡೆಸಿದುದರಿಂದ ಆತನ ಕಣ್ಣುಗಳಿಗೆ ಗಾಯವಾಯಿತು. ನಂತರ ನಾಡಿಯಾದ ಕಲ್ಯಾಣಿ ಜವಾಹರಲಾಲ್ ಆಸ್ಪತ್ರೆಯಲ್ಲಿ ಆತನ ಇನ್ನೊಂದು ಕಣ್ಣನ್ನು ಉಳಿಸಲು ಒಂದು ಕಣ್ಣನ್ನು ತೆಗೆಯಲಾಯಿತು. ಈ ಬಗ್ಗೆ ಪೋಲೀಸ್ ಹಾಗೂ ಆಸ್ಪತ್ರೆಯ ದಾಖಲೆಗಳಲ್ಲಿ ವಿವರಗಳಿವೆ. ಹೀಗಿರುವಾಗ ಸಬ್ ಜುಡೀಸ್ ಆಗಿರುವ ಕೇಸೊಂದು ಸಮೂಹ ಮಾಧ್ಯಮದಲ್ಲಿ ಒಂದು ಸುದ್ದಿಯಾಗಿ ಪ್ರಸಾರಗೊಳ್ಳಲು ಅವಕಾಶವಿದೆಯೇ ? ಈ ಪ್ರಶ್ನೆಯನ್ನು ಪಶ್ಚಿಮ ಬಂಗಾಳದ ಸಂಸತ್ ಸದಸ್ಯರು ವಾರ್ತಾ ಹಾಗೂ ಪ್ರಸಾರ ಮಂತ್ರಿ ಎಚ್. ಕೆ. ಎಲ್. ಭಗತ್‌ರವರಿಗೆ ಬರೆದ ಪ್ರತಿಭಟನಾ ಪತ್ರದಲ್ಲಿ ಕೇಳಿದ್ದಾರೆ. ಬಹುಶಃ ವಿರೋಧ ಪಕ್ಷಗಳಿಗೆ, ವಿಶೇಷವಾಗಿ ಸಿ. ಪಿ. ಐ. (ಎಂ)ಗೆ ಮಸಿ ಬಳಿಯುವ ಎಂತಹ ಸುಳ್ಳಿಗೂ ಅವಕಾಶವಿದೆ ಎಂದು ಮಂತ್ರಿವರ್ಯರು ಹಾಗೂ ಅವರ ಇಲಾಖೆ ಭಾವಿಸಿರಬೇಕು.

ವಾರ್ಷಿಕ ಮಹಾಸಭೆ

ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆಯು ತಾ. 30–7–1983 ರಂದು ಕಾ॥ ಯು. ಬಿ. ಲೋಕಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ ಕಾ॥ ವಾಸುದೇವ ಆಚಾರಿಯವರು ವರದಿಯನ್ನು ಮತ್ತು ಲೆಕ್ಕಪತ್ರವನ್ನು ಸಭೆಯ ಮುಂದಿಟ್ಟರು.

ಬೀಡಿ ಮಜೂರರ ಸಂಘಟನೆಯನ್ನು ಬಲಪಡಿಸುವ ಬಗ್ಗೆ ಕಾ॥ ಬಾಲಕೃಷ್ಣ ಶೆಟ್ಟಿ ಮತ್ತು ಕಾ॥ ಹೊನ್ನಯ್ಯನವರು ಸಭೆಯಲ್ಲಿ ಮಾತನಾಡಿದರು.

ಬೀಡಿ ಮಜೂರರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸುತ್ತಾ ಕಾ॥ ಯು. ಬಿ. ಲೋಕಯ್ಯನವರು ಇದನ್ನು ಒಗ್ಗಟಿನ ಬಲದಿಂದಲೆ ಬಗೆಹರಿಸಬೇಕೆಂದರು. ವಿರೋಧಿಗಳ ಅಪಪ್ರಚಾರಕ್ಕೆ ಬಲಿ ಬೀಳದೆ ಬೀಡಿ ಮಜೂರರು ಸಂಘಟಿತ ಹೋರಾಟ ನಡೆಸಲು ಸಂಘವನ್ನು ಬಲಪಡಿಸಬೇಕೆಂದರು. ಮುಂದಿನ ವರ್ಷಕ್ಕೆ ಕಾ॥ ಆನಂದ ಪೂಜಾರಿ ಅಧ್ಯಕ್ಷರಾಗಿಯೂ, ಕಾ॥ ಸುಂದರ ನಾಯ್ಕ ಉಪಾಧ್ಯಕ್ಷರಾಗಿಯೂ. ಕಾ॥ ವಾಸುದೇವ ಆಚಾರಿ ಕಾರ್ಯದರ್ಶಿಯೂ, ಕಾ॥ ನಾರಾಯಣ ಜೊತೆ ಕಾರ್ಯದರ್ಶಿಯೂ, ಕಾ॥ ಬಾಲಕೃಷ್ಣ ಶೆಟ್ಟಿ ಕುಪ್ಪೆಪದವು ಕೋಶಾಧಿಕಾರಿಯಾಗಿಯೂ ಇರುವ 24 ಮಂದಿಯ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಬೆಂಗಳೂರು :

ಡಿ.ವೈ.ಎಫ್.ಐ ನಿಂದ ರಾತ್ರಿಯ ಪಾಠ ಶಾಲೆ

ಬೆಂಗಳೂರು ನಗರದ ಶ್ರೀರಾಮಪುರದ ನೀಲಗಿರಿ ಪಾಪಣ್ಣ ಬ್ಲಾಕ್ ಸ್ಲಂ ಬಡಾವಣೆಯಲ್ಲಿ ಸ್ಥಳೀಯ ಡಿವೈಎಫ್‌ಐ ಕಾರ್ಯಕರ್ತರಿಂದ ಬಡಮಕ್ಕಳಿಗೆ ರಾತ್ರಿಯ ಪಾಠಶಾಲೆಯನ್ನು ಪ್ರಾರಂಭಿಸಲಾಗಿದೆ. ಪ್ರಾಥಮಿಕ ಹಂತದಿಂದ ಏಳನೇ ತರಗತಿಯವರೆವಿಗೆ ಪಾಠ ನಡೆಯುತ್ತಿದ್ದು 25 ರಿಂದ 30 ಮಕ್ಕಳು ಹಾಜರಾಗುತ್ತಿದ್ದಾರೆ. ಮುಂದೆ 100 ಕ್ಕೆ ಮುಟ್ಟುವ ನಿರೀಕ್ಷೆಯಿದೆ. ಈ ಮಕ್ಕಳ ಹಿಂದುಳಿದವರಾಗಿದ್ದು ಇವರ ತಂದೆ ತಾಯಿ. ಪೋಷಕರನ್ನು ಡಿವೈಎಫ್‌ಐ ಸಂಪರ್ಕಿಸುತ್ತಿದೆ. ತರಗತಿಯ ವೇಳೆ ಸಂಜೆ 6 ರಿಂದ ರಾತ್ರಿ 9 ರ ವರೆವಿಗೆ ಎಂದು ನಿಗದಿ ಪಡಿಸಲಾಗಿದೆ.

ಡಿವೈಎಫ್‌ಐ ಮುಖಂಡರಾದ ಗುರುಸ್ವಾಮಿ, ಮೂರ್ತಿ, ವೆಂಕಟೇಶ್, ರಂಗಪ್ಪ, ಶಿವಕುಮಾರ್, ಶಿವಣ್ಣ, ಬಸವರಾಜ್, ಶ್ರೀನಿವಾಸ್, ಚೆಲುವರಾಜ್, ಹಾಗೂ ಮತ್ತಿಬ್ಬರು ಸಂಗಾತಿಗಳು ಉಪಾಧ್ಯಾಯರುಗಳಾಗಿ ನೇಮಕವಾಗಿದ್ದಾರೆ. ಮುಂದೆ ಆರ್.ಜಿ.ಐ ಕಾಲೋನಿ ಕಮಲಾ ನಗರ ಸ್ಲಂಗಳಿಗೆ ವಿಸ್ತರಿಸುವ ಯೋಜನೆ ಇದೆ. ಹಾಗೂ ವಯಸ್ಕರ ಶಿಕ್ಷಣ ನಡೆಸಲೂ ಸಹ ಉದ್ದೇಶ ಇಟ್ಟುಕೊಳ್ಳಲಾಗಿದೆ.

ದ. ಕನ್ನಡ

ಆಟೋರಿಕ್ಷಾ ಚಾಲಕರ ಸಂಘದ ಒತ್ತಾಯ

ದಕ್ಷಿಣ ಕನ್ನಡ ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ತಾ. 23–7–83 ರಂದು ಸೇರಿ ಮಂಗಳೂರಿನಲ್ಲಿ ಆಟೋರಿಕ್ಷಾಗಳಿಗೆ ಪ್ರತ್ಯೇಕ ಮೀಟರ್ ದರ ನೀಡಬೇಕು ಮತ್ತು ಮೀಟರ್ ದರ ನಿಗದಿಗೊಳಿಸುವ ಅಧಿಕಾರವನ್ನು ಜಿಲ್ಲೆಯ ಆರ್.ಟಿ.ಓ.ರವರಿಗೆ ನೀಡಬೇಕೆಂದು ಒತ್ತಾಯಿಸಿ ಮಂಗಳೂರಿಗೆ ಭೇಟಿಕೊಡಲಿರುವ ಸಾರಿಗೆ ಸಚಿವರು ಮತ್ತು ಕಮೀಷನರಿಗೆ ಮನವಿ ಅರ್ಪಿಸಬೇಕೆಂದು ನಿರ್ಣಯಿಸಲಾಯಿತು.

ಇತ್ತೀಚೆಗೆ ಮಂಗಳೂರಿನಲಿ ರಿಕ್ಷಾ ಚಾಲಕರು ಮೀಟರ್ ದರ ಏರಿಸಬೇಕೆಂದು ನಡೆಸಿದ ಹೋರಾಟಕ್ಕೆ ದ.ಕ. ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘವು ಬೆಂಬಲ ನೀಡುತ್ತದೆ. ಮತ್ತು ಈ ಹೋರಾಟದ ಬಗ್ಗೆ ಬೆಂಗಳೂರಿನ ಎರಡು ದಿನಪತ್ರಿಕೆಗಳು ರಿಕ್ಷಾ ಚಾಲಕರ ಬೇಡಿಕೆಗೆ ವ್ಯತಿರಿಕ್ತವಾದ ಅರ್ಥ ಬರುವ ರೀತಿಯಲ್ಲಿ ಪ್ರಕಟಿಸಿದ ಸುದ್ದಿಯು ರಿಕ್ಷಾ ಚಾಲಕರ ಸಂಕಷ್ಟಗಳನ್ನು ಕಡೆಗಾಣಿಸಿದಂತಾಗಿದೆ. ರಿಕ್ಷಾ ಚಾಲಕರೂ ಕಾರ್ಮಿಕ ವರ್ಗಕ್ಕೆ ಸೇರಿದವರು ಆದ್ದರಿಂದಲೇ ಇವರ ಸಮಸ್ಯೆಗಳನ್ನೆತ್ತಿ ಅದರ ಪರಿಹಾರಕ್ಕಾಗಿ ಹೋರಾಟಕ್ಕೆ ನೇತೃತ್ವ ಕೊಟ್ಟವರು ಕಾರ್ಮಿಕ ಮುಖಂಡ ಶ್ರೀ ಸೂರ್ಯನಾರಾಯಣ ರಾವ್‌ರವರು ಇವರ ಈ ಪ್ರಯತ್ನಕ್ಕೆ ರಿಕ್ಷಾ ಚಾಲಕರು ತುಂಬು ಹೃದಯದ ಬೆಂಬಲ ನೀಡುತ್ತಾರೆ ಎಂದೂ ದ.ಕ. ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘದ ಕಾರ್ಯಕಾರಿ ಸಮಿತಿ ಕೈಗೊಂಡ ನಿರ್ಣಯದಲ್ಲಿ ಹೇಳಿದೆ. ವಿವರವನ್ನು ಸಂಘದ ಕಾರ್ಯದರ್ಶಿ ಕೆ. ಅಬೂಬಕ್ಕರ್ ವರದಿಗಾರರಿಗೆ ತಿಳಿಸಿದರು.

ನೆರೆಹೊರೆ

ಬಿಹಾರದ ಸಣ್ಣ ಕೈಗಾರಿಕೆಗಳು

ಕಾಲುಭಾಗ ವಿದ್ಯುತ್ ಪೂರೈಕೆಗೆ ಏಳು ಪಟ್ಟು ತೆರಬೇಕು!

ಬಿಹಾರದ ವಿದ್ಯುಚ್ಛಕ್ತಿ ಮಂಡಲಿ ರಾಜ್ಯದ ಸಣ್ಣ ಪ್ರಮಾಣದ ಕೈಗಾರಿಕೆಗಳು ನಿರ್ದಿಷ್ಟ ಪ್ರಮಾಣದಷ್ಟು ಕನಿಷ್ಟ ವಿದ್ಯುಚ್ಛಕ್ತಿ ಬಳಸಲೇಬೇಕೆಂದು ವಿಧಿಸಿ ಅದಕ್ಕೆ ದರ ವಸೂಲಿ ಮಾಡುತ್ತಿದೆ. ಆದರೆ ಈ ಕನಿಷ್ಠ ಮಿತಿಯ ಕಾಲುಭಾಗದಷ್ಟು ವಿದ್ಯುಚ್ಛಕ್ತಿಯನ್ನು ಕೂಡಾ ಸಣ್ಣ ಕೈಗಾರಿಕೆಗಳಿಗೆ ಪೂರೈಸುತ್ತಿಲ್ಲ. ಇದರಿಂದ 34 ಸಾವಿರ ಸಣ್ಣ ಘಟಕಗಳಲ್ಲಿ 20 ಸಾವಿರದಷ್ಟು ಮುಚ್ಚಿದ್ದು ಕ್ರಮೇಣ ರೋಗಗ್ರಸ್ತಗೊಳ್ಳುತ್ತಿದೆ. ಪರಿಣಾಮವಾಗಿ ಸುಮಾರು ಮೂರು ಲಕ್ಷ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. 800 ಘಟಕಗಳು ಈಗಾಗಲೇ ತಮಗೆ ಉತ್ಪಾದನೆಗೆ ಕೊಟ್ಟಿರುವ ಪರವಾನಿಗೆಯನ್ನು ವಿದ್ಯುಚ್ಛಕ್ತಿ ಅಭಾವದಿಂದಾಗಿ ವಾಪಾಸು ಮಾಡಿವೆ.

ಈಗ ಬಿಹಾರದ ವಿದ್ಯುಚ್ಛಕ್ತಿ ಮಂಡಳಿ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸುವ ಬದಲು ಸಣ್ಣ ಪ್ರಮಾಣದ ಕೈಗಾರಿಕೆಗಳ ಕತ್ತು ಹಿಸುಕಲು ಮುಂದಾಗಿದೆ. ಈಗಾಗಲೇ ಬೇರೆಲ್ಲಾ ರಾಜ್ಯಗಳಿಗಿಂತ ಜಾಸ್ತಿಯಿರುವ ವಿದ್ಯುತ್ ದರವನ್ನು ಅದು ಏಳು ಪಟ್ಟು ಹೆಚ್ಚಿಸಿದೆ. ಇದೂ ಸಾಲದೆಂಬಂತೆ ವಿದ್ಯುತ್ ಬಳಕೆಯ ಕನಿಷ್ಟ ಮಿತಿಯನ್ನೂ ದ್ವಿಗುಣಗೊಳಿಸಿದೆ. ಅಂದರೆ ಸಣ್ಣ ಕೈಗಾರಿಕೆಗಳು ಪಡೆಯುದಿರುವ ವಿದ್ಯುಚ್ಛಕ್ತಿ ಪ್ರಮಾಣ ಹೆಚ್ಚಿ ಅದಕ್ಕೆ ಇನ್ನಷ್ಟು ಬೆಲೆ ತೆರಬೇಕಾಗಿದೆ.

ಈ ದುರವಸ್ಥೆಯ ಸನ್ನಿವೇಶವನ್ನು ಎದುರಿಸಲು ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಘದ ಒಕ್ಕೂಟ ಹಾಗೂ ಕೇಂದ್ರಿಯ ಕಾರ್ಮಿಕ ಸಂಘಟನೆಗಳ ರಾಜ್ಯ ಮಟ್ಟದ ಸಮಾವೇಶ ನಡೆದು ಸಿ. ಐ. ಟಿ. ಯು, ಎ. ಐ. ಟಿ. ಯು. ಸಿ. ಹಾಗೂ ಯು. ಟಿ. ಯು. ಸಿ. ಮತ್ತು ಸಣ್ಣ ಕೈಗಾರಿಕೆಗಳ ಒಡೆಯರು ವಿದ್ಯುಚ್ಛಕ್ತಿ ಮಂಡಳಿಯ ವಿರುದ್ಧ "ದರ ಪಾವತಿ ನಿರಾಕರಣೆ" ಯ ಚಳುವಳಿ ಆರಂಭಿಸಲು ನಿರ್ಧರಿಸಿದ್ದಾರೆ. ಸಮಾವೇಶಕ್ಕೆ ವಿದ್ಯುಚ್ಛಕ್ತಿ ಸಂಘಗಳ ಮತ್ತು ಗೃಹ, ಕೃಷಿ ಮತ್ತು ವಾಣಿಜ್ಯ ಬಳಕೆದಾರರನ್ನೂ ಆಹ್ವಾನಿಸಲಾಗಿತ್ತು. ವಿದ್ಯುತ್ ದರ ಏರಿಕೆಗೆ ಪ್ರತಿರೋಧ ಒಡ್ಡಲು ಹಾಗೂ ಕನಿಷ್ಟ ವಿದ್ಯುಚ್ಛಕ್ತಿ ಪೂರೈಕೆಯಾಗುವಂತೆ ಮಾಡಲು ಬಲಿಷ್ಟ ಚಳವಳಿಯನ್ನು ಸಂಘಟಿಸಲಾಗುತ್ತಿದೆ.

ಮಹಾರಾಷ್ಟ್ರ ಗಾಜು ಕೈಗಾರಿಕೆ

ಕನಿಷ್ಟ ಕೂಲಿಯಲ್ಲ, ಉಪವಾಸ ಕೂಲಿ !

ಗಾಜು ಕೈಗಾರಿಕೆ ಮಾಲಿಕರಿಗೆ ಅತ್ಯಂತ ಲಾಭದಾಯಕವಾದ, ಆದರೆ ಕಾರ್ಮಿಕರಿಗೆ ಅಷ್ಟೇ ತೊಂದರೆಗಳುಳ್ಳ ಕೈಗಾರಿಕೆ. ಮಹಾರಾಷ್ಟ್ರದಲ್ಲಿ ಈ ಕೈಗಾರಿಕೆಯಲ್ಲಿ 1976ರಲ್ಲಿ 7 ರೂ. 50 ಪೈಸೆ ಇದ್ದ ಕನಿಷ್ಟ ಕೂಲಿಯನ್ನು ಪರಿಷ್ಕರಿಸಲು ನೇಮಕಗೊಂಡ ಸಮಿತಿ ನಿರ್ಧರಿಸಿರುವ ಕನಿಷ್ಟ ಕೂಲಿ ನಿಜವಾಗಿಯೂ ಉಪವಾಸ ಕೂಲಿಯಾಗಿದೆ.

1976ರಲ್ಲಿ ನಿರ್ಧರಿಸಿದ ಕನಿಷ್ಟ ಕೂಲಿಯೇ ಬಹಳ ಕಮ್ಮಿಯಿದ್ದು, 1976ರಿಂದೀಚೆಗೆ ಆದ ಬೆಲೆ ಏರಿಕೆಯನ್ನು ಗಮನಕ್ಕೆ ತಗೊಂಡರೆ ಕನಿಷ್ಟ ಕೂಲಿ 19 ರೂ ಗಿಂತ ಕಡಿಮೆಯಿರಲು ಸಾಧ್ಯವಿಲ್ಲ. ಆದರೆ ಸಮಿತಿ ಈ ಯಾವ ಅಂಶಗಳನ್ನೂ ಗಣನೆಗೆ ತಗೊಳ್ಳದೆ ಮುಂಬೈಯಲ್ಲಿ 12 ರೂ. ಹಾಗೂ ಇತರೆಡೆ 6 ರೂ. 75 ಪೈಸೆ ಕನಿಷ್ಟ ಕೂಲಿ ನಿಗದಿ ಪಡಿಸಿದೆ. ಇದರಿಂದಾಗಿ ಸುಮಾರು 20 ಸಾವಿರ ಕಾರ್ಮಿಕರು ತೊಂದರೆಗೀಡಾಗಿದ್ದಾರೆ.

ಸಮಿತಿ 1976ರಿಂದೀಚೆಗಿನ ಬೆಲೆ ಏರಿಕೆಯನ್ನು ಉಪೇಕ್ಷಿಸಿದೆ ಮಾತ್ರವಲ್ಲ, ಮುಂದಾಗಬಹುದಾದ ಬೆಲೆಯೇರಿಕೆಯಿಂದ ಕೂಲಿಯಲ್ಲಾಗುವ ಕಡಿತವನ್ನು ಸರಿದೂಗಿಸುವ ತುಟ್ಟಿ ಭತ್ಯೆಕ್ಕೂ ಅವಕಾಶ ನೀಡಿಲ್ಲ. ಬೇರೆ ಕೈಗಾರಿಕೆಗಳ ಕನಿಷ್ಟ ಕೂಲಿ ಸಮಿತಿಗಳು ಜೀವನ ವೆಚ್ಚ ಸೂಚ್ಯಂಕಗಳಿಗೆ ಹೊಂದಿಕೊಂಡ ತುಟ್ಟಿಭತ್ಯೆಕ್ಕೆ ಅವಕಾಶ ಮಾಡಿಕೊಟ್ಟಿವೆ. ಜೀವನ ವೆಚ್ಚ ಸೂಚ್ಯಂಕಕ್ಕೆ ಹೊಂದಿಕೊಂಡಂತೆ ತುಟ್ಟಿಭತ್ಯೆ ಅಥವಾ ವಿಶೇಷ ಭತ್ಯೆ ನೀಡುವ ತತ್ವವನ್ನು ಈ ದೇಶದ ಕೈಗಾರಿಕಾ ವಿವಾದಗಳಲ್ಲಿ ಹಾಗೂ ಈ ದೇಶದ ಅತ್ಯುಚ್ಚ ನ್ಯಾಯಾಲಯ ಕೂಡಾ ಸ್ವೀಕರಿಸಿದ್ದರೂ ಗಾಜು ಕೈಗಾರಿಕೆಯಲ್ಲಿ ಅದಕ್ಕೆ ಅವಕಾಶ ಕೊಟ್ಟಿಲ್ಲ.

ಸಿ. ಐ. ಟಿ. ಯು. ನ ಮಹಾರಾಷ್ಟ್ರ ರಾಜ್ಯ ಸಮಿತಿ ಈ ಕನಿಷ್ಟ ಕೂಲಿಯನ್ನು ಪರಿಷ್ಕರಿಸಿ ತುಟ್ಟಿಭತ್ಯೆ ಅಥವಾ ವಿಶೇಷ ಭತ್ಯೆಗೆ ಅವಕಾಶ ಮಾಡಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸಿದೆ.

ಕೇರಳದ ಯುವಜನರ ಪ್ರತಿಜ್ಞೆ

"ಕೋಮುವಾದೀ ಹುಚ್ಚರಿಗೆ ಅವಕಾಶ ಕೊಡೆವು"

ಆಗಸ್ಟ್ 1 ರಂದು ತಿರುವನಂತಪುರದ ವ್ಯಾಪಾರ ಕೇಂದ್ರವಾದ ಪಾಳಯಂನಲ್ಲಿರುವ ಹುತಾತ್ಮ ಸ್ತಂಭದ ಬಳಿ ಸುಮಾರು 20 ಸಾವಿರ ಶುಭ್ರ ಬಿಳಿ ಸಮವಸ್ತ್ರ ಧರಿಸಿದ ಯುವಕರು ಸೇರಿದ್ದರು. ಪಾಳಯಂನ ಚರ್ಚ್ ಹತ್ತಿರದ ಮಸೀದಿ ಹಾಗೂ ದೇವಸ್ಥಾನವನ್ನು ಒಟ್ಟುಸೇರಿಸುವ ರೀತಿಯಲ್ಲಿ ವೃತ್ತಾಕಾರದಲ್ಲಿಕೂತ್ತಿದ್ದ ಈ ಸ್ವಯಂ ಸೇವಕರು ಡಿ.ವೈ.ಎಫ್.ಐ.ನ ರಾಜ್ಯ ಕಾರ್ಯದರ್ಶಿ ಎಂ. ವಿಜಯ ಕುಮಾರ್ ಓದಿ ಹೇಳುತ್ತಿದ್ದ ಪ್ರತಿಜ್ಞೆಗೆ ಧ್ವನಿಗೂಡಿಸುತ್ತಿದ್ದರು.

"ನಾವು ಕೇರಳದ ಯುವಜನ ಜಾತೀವಾದ ಮತ್ತು ಕೋಮುವಾದ ಹಾಗೂ ಈ ಪ್ರವೃತ್ತಿಗಳನ್ನು ಪೋಷಿಸುವ ಸಾಮಾಜಿಕ ಪರಿಸ್ಥಿತಿಗಳ ವಿರುದ್ಧ ಎಡೆಬಿಡದ ಹೋರಾಟ ನಡೆಸುತ್ತೇವೆಂದು ಪ್ರತಿಜ್ಞೆ ತೊಡುತ್ತೇವೆ. ಕೋಮುವಾದದ ಬೀಜ ಬಿತ್ತಿ, ಆ ಮೂಲಕ ಜನರನ್ನು ವಿಭಜಿಸಿ ಅಧಿಕಾರದಲ್ಲಿ ಉಳಿಯ ಬಯಸುವ ಆಳುವ ವರ್ಗಗಳ ಪಿತೂರಿಗಳ ವಿರುದ್ಧ ಹೋರಾಡಿ ಅವನ್ನು ವಿಫಲಗೊಳಿಸುತ್ತೇವೆ ಎಂದು ಪ್ರತಿಜ್ಞೆ ಗೈಯ್ಯುತ್ತೇವೆ. ಕೋಮುವಾದೀ ಹುಚ್ಚರು ಕೇರಳವನ್ನು ಸ್ವಾಧೀನಪಡಿಸಿಕೊಳ್ಳಲು ನಾವೆಂದೂ ಬಿಡೆವು ಎಂದು ಪ್ರತಿಜ್ಞೆ ಮಾಡುತ್ತೇವೆ ಹಾಗೂ ಅವರ ವಿರುದ್ಧ ರಕ್ತದ ಕೊನೆಯ ಬಿಂದುವಿನವರೆಗೂ ಹೋರಾಡುತ್ತೇವೆ ಎಂದು ಘೋಷಿಸುತ್ತೇವೆ."

ಈ ಸಭೆಯ ಹಿನ್ನೆಲೆಯಲ್ಲಿ ಜಾತೀವಾದ ಹಾಗೂ ಅಸ್ಪೃಶ್ಯತೆಯ ವಿರುದ್ಧ ಎಡೆಬಿಡದ ಹೋರಾಟ ನಡೆಸಿದ ಮಲೆಯಾಳಿ ಕವಿ ಕುಮಾರನ್ ಅಸನ್‌ರ ಪ್ರತಿಮೆ ಎದ್ದು ಕಾಣುತ್ತಿತ್ತು.

ತಿರುವನಂತಪುರದಲ್ಲಿ ಮಾತ್ರವಲ್ಲ ಕೇರಳದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸುಮಾರು 2 ಲಕ್ಷ ಯುವಕ ಹಾಗೂ ಯುವತಿಯರು ಅಂದು ಕೋಮುವಾದದ ವಿರುದ್ಧ ಈ ಗಂಭೀರ ಪ್ರತಿಜ್ಞೆ ಕೈಗೊಂಡರು. ಈ ರ್‍ಯಾಲಿಗಳೊಂದಿಗೆ ಡಿ.ವೈ.ಎಫ್.ಐ. ಕಳೆದ ಎರಡು ತಿಂಗಳಿಂದ ಕೋಮು ಸೌಹಾರ್ದಕ್ಕಾಗಿ ನಡೆಸಿದ ಪ್ರಚಾರ ಕಾರ್ಯದ ಮೊದಲ ಘಟ್ಟ ಮುಗಿದಂತಾಯಿತು. ರಾಜ್ಯದಲ್ಲಿ ಕಾಂಗ್ರೆಸ್ (ಐ) ನೇತೃತ್ವದ ಸರಕಾರದ ತಪ್ಪುಧೋರಣೆಗಳಿಂದಾಗಿ ಉಂಟಾಗಿದ್ದ ಕೋಮುವಾದೀ ಉನ್ಮಾದದ ಹಾಗೂ ಕಲಹದ ಸನ್ನಿವೇಶದಲ್ಲಿ ಕೇರಳದ ಎಲ್ಲಾ ಹಳ್ಳಿ, ಪಟ್ಟಣ ಹಾಗೂ ನಗರಗಳ ಪ್ರತಿಯೊಂದು ಮೂಲೆಗೂ ಕೋಮು ಸೌಹಾರ್ದದ ಸಂದೇಶವನ್ನು ತಲುಪಿಸುವುದು ಅಗತ್ಯ ಎಂದು ಮನಗಂಡ ಡಿ.ವೈ.ಎಫ್.ಐ. ಈ ಆಂದೋಲನವನ್ನು ಆರಂಭಿಸಿತ್ತು. ಜೂನ್ ಹಾಗೂ ಜುಲೈ ತಿಂಗಳುಗಳಲ್ಲಿ ಡಿ. ವೈ. ಎಫ್. ಐ. ಸ್ವಯಂ ಸೇವಕರು ಮನೆ ಮನೆಗೆ ಭೇಟಿಕೊಟ್ಟು, ಎರಡು ಲಕ್ಷ ಕರಪತ್ರಗಳನ್ನು ಹಂಚಿ, ಕೋಮು ಸೌಹಾರ್ದ ಆಂದೋಲನ ಜಾಥಾ ನಡೆಸಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಕೋಮು ಸೌಹಾರ್ದದ ಸಂದೇಶವನ್ನು ಎಲ್ಲೆಡೆ ಬಿತ್ತರಿಸಲು ಪ್ರಯತ್ನಿಸಿದರು.

ಆಗಸ್ಟ್ 1 ರಂದು ನಡೆದ ಮೆರವಣಿಗೆಗಳಲ್ಲಿ ಕೋಮು ಸೌಹಾರ್ದದ ಘೋಷಣೆಗಳನ್ನು ಕೂಗಲಾಯಿತು. ಮೆರವಣಿಗೆಗಳನ್ನು ಕಾರ್ಮಿಕರು, ರೈತರು, ಕೃಷಿ ಕಾರ್ಮಿಕರು, ನೌಕರರು, ಎಲ್ಲಾ ಜಾತಿಯ, ಎಲ್ಲಾ ಕೋಮುಗಳ ಜನರು ಉತ್ಸಾಹದಿಂದ ಸ್ವಾಗತಿಸಿದರು. ಕಳೆದ ವರ್ಷದ ಕೋಮು ಗಲಭೆಯಲ್ಲಿ ಭಸ್ಮಗೊಂಡಿದ್ದ ಜಲ್ಲಿ ಬಜಾರ್‌ನ ತಲೆಹೊರೆ ಕಾರ್ಮಿಕರು ಮೆರವಣಿಗೆಗಾರರ ಮೇಲೆ ಹೂಮಳೆಗೈದರು. ಹದಗೆಡುತ್ತಿರುವ ಕೋಮುಸ್ಥಿತಿಯಿಂದ ಆತಂಕಿತರಾಗಿದ್ದ ರಾಜ್ಯದ ಜನ ಈ ಹೊಸ ತಲೆಮಾರಿನವರು ಕೋಮು ಶಾಂತಿಯನ್ನು ಕದಡಿಸುವವರ ವಿರುದ್ಧ ಹೋರಾಟಕ್ಕೆ ಪಣತೊಟ್ಟು ನಿಂತಿರುವುದನ್ನು ಕಂಡು ಭರವಸೆಯ ನಿಟ್ಟುಸಿರುಬಿಡುತ್ತಿದ್ದಾರೆ.

ಉತ್ತರ ಪ್ರದೇಶದ ಗಿರಣಿ ಕಾರ್ಮಿಕರಿಂದ

ಸ್ವದೇಶಿ ಮಿಲ್ ರಾಷ್ಟ್ರೀಕರಣಕ್ಕೆ ಒತ್ತಾಯ

ಕಾನಪುರದ ಎಲ್ಲಾ ಒಂಭತ್ತು ಬಟ್ಟೆ ಗಿರಣಿಗಳ ಕಾರ್ಮಿಕರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಜುಲೈ 26 ರಂದು ಒಂದು ದಿನದ ಯಶಸ್ವೀ ಮುಷ್ಕರ ನಡೆಸಿ ಸ್ವದೇಶಿ ಕಾಟನ್ ಮಿಲ್ಲನ್ನು ರಾಷ್ಟ್ರೀಕರಿಸಬೇಕೆಂದು ಒತ್ತಾಯಿಸಿದ್ದಾರೆ.

ನವದೆಹಲಿಯಲ್ಲಿ ಕೂಡಾ ಕಾನಪುರದಿಂದ ಆರು ಬಸ್ಸುಗಳಲ್ಲಿ ಬಂದ 500 ಕಾರ್ಮಿಕರು ಸ್ವದೇಶಿ ಕಾಟನ್ ಮಿಲ್ಸ್ ಗುಂಪಿನ ಗಿರಣಿಗಳು ಹಾಗೂ ಇತರ ಎರಡು ಗಿರಣಿಗಳನ್ನು ರಾಷ್ಟ್ರೀಕರಿಸಬೇಕೆಂದು ಹಾಗೂ ಜೆ. ಕೆ. ರೇಯಾನ್ ಗಿರಣಿಯನ್ನು ಸರಕಾರ ವಹಿಸಿಕೊಳ್ಳಬೇಕೆಂದು ಒತ್ತಾಯಿಸಿ ಜುಲೈ 28 ರಂದು ಬೋಟ್ ಕ್ಲಬ್‌ನಲ್ಲಿ ಪ್ರದರ್ಶನ ನಡೆಸಿದರು. ಜೆ. ಕೆ. ರೇಯಾನ್ ಆಡಳಿತ ವರ್ಗ ಮೇ 16ರಿಂದಲೇ ಗಿರಣಿ ಮುಚ್ಚಿದ್ದರೂ ಸರಕಾರಕ್ಕೆ ಜುಲೈ 15ರಿಂದ ಮುಚ್ಚುವುದಾಗಿ ನೋಟೀಸು ನೀಡಿದೆ.

ಕಾರ್ಮಿಕರ ಪರವಾಗಿ ಸಿ. ಐ. ಟಿ. ಯು. ರಾಜ್ಯ ಸಮಿತಿಯ ಕಾರ್ಯದರ್ಶಿ ಹಾಗೂ ಇತರರನ್ನೊಳಗೊಂಡ ಪ್ರತಿನಿಧಿ ಮಂಡಲ ಲೋಕಸಭಾಧ್ಯಕ್ಷರಿಗೆ ಮನವಿ ಅರ್ಪಿಸಿತು.

ಜುಲೈ 29ರಂದು ನೂರು ಮಂದಿ ಕಾರ್ಮಿಕರು 'ಉದ್ಯೋಗ ಭವನ' ದೆದುರು ಧರಣಿ ಮುಷ್ಕರ ನಡೆಸಿದರು. ವಾಣಿಜ್ಯ ಮಂತ್ರಿಯವರಿಗೆ ಸಲ್ಲಿಸಿದ ಮನವಿಯಲ್ಲಿ ಸಿ. ಐ. ಟಿ. ಯು. ಬಂಡವಾಳವನ್ನು ಬೇರೆಡೆಗೆ ವರ್ಗಾಯಿಸಿಯೋ, ದುರಾಡಳಿತದಿಂದಲೋ ಅಥವಾ ಬೇರೆ ಯಾವ ವಿಧಾನದಿಂದಲೋ ಒಂದು ಕಂಪನಿಯನ್ನು ರೋಗಗ್ರಸ್ತಗೊಳಿಸಿ ಸಾವಿರಾರು ಕಾರ್ಮಿಕರನ್ನು ಬೀದಿಪಾಲು ಮಾಡುವ ಗುತ್ತೇದಾರಿ ಗುಂಪುಗಳಿಗೆ ಕೊಟ್ಟಿರುವ ಎಲ್ಲಾ ಪರವಾನಿಗೆಗಳನ್ನು ರದ್ದು ಮಾಡಿ, ಸಾರ್ವಜನಿಕ ಹಣಕಾಸು ಸಂಸ್ಥೆಗಳಿಂದ ಈ ಗುತ್ತೇದಾರಿಗಳಿಗೆ ನೀಡಿದ ಹಣವನ್ನು ಹಿಂದಿರುಗಿ ಪಡೆದು, ಸರಕಾರವೇ ಈ ಕಂಪೆನಿಗಳನ್ನು ವಹಿಸಿಕೊಂಡು 25ನೇ ಭಾರತೀಯ ಕಾರ್ಮಿಕ ಸಮ್ಮೇಳನದ ನಿರ್ಧಾರದಂತೆ ಅವನ್ನು ನಡೆಸಬೇಕೆಂದು ಒತ್ತಾಯಿಸಿದೆ. ಈ ಮೂಲಕ ನೂಲು ಕೈಗಾರಿಕೆಯಲ್ಲಿ ಸಾರ್ವಜನಿಕ ವಲಯವನ್ನು ವಿಸ್ತರಿಸಿ ಗುತ್ತೇದಾರಿಗಳು ಕೃತಕವಾಗಿ ಹೆಚ್ಚಿಸುವ ಬೆಲೆಗಳಿಂದ ಜನ ಸಾಮಾನ್ಯರಿಗೆ ಪರಿಹಾರ ಒದಗಿಸಬೇಕೆಂದೂ ಸಿ. ಐ. ಟಿ. ಯು. ಒತ್ತಾಯಿಸಿದೆ.

ವಿಶ್ವ ಶಾಂತಿ ದಿನಾಚರಣೆ-ಯಶಸ್ವಿಗೊಳಿಸಿ

(1ನೇ ಪುಟದಿಂದ)

ಮಾಡುವ ಹಣವನ್ನು ಸಮತಾವಾದ ರಚನೆಗಾಗಿ ವ್ಯಯ ಮಾಡಬಹುದು. ನಮ್ಮ ಚಳುವಳಿಗೆ ಅದರಿಂದ ಲಾಭ ವಾಗುತ್ತದೆ. ನಾವು ಬಲವಾದ ಚಳುವಳಿ ಮೂಲಕ ಯುದ್ಧ ತಯಾರಿಕೆಯಲ್ಲಿ ಕಡಿತವನ್ನುಂಟು ಮಾಡಿದರೆ ಅದರಿಂದಾಗಿ ಬಂಡವಾಳಶಾಹಿ ದೇಶಗಳಲ್ಲಿ ಬಿಕ್ಕಟ್ಟು ಉಂಟಾಗುತ್ತದೆ. ಅಮೇರಿಕಕ್ಕೆ ಯುದ್ಧ ಸಾಮಗ್ರಿಗಳ ಮಾರಾಟಕ್ಕೆ ಮಾರ್ಕೆಟು ಸಿಗುತ್ತದೆ. ಗ್ರಾಹಕರ ವಸ್ತುಗಳಿಗಲ್ಲ. ಶಸ್ತ್ರಾಸ್ತ್ರಗಳ ಉತ್ಪಾದನೆ ನಿಂತುಹೋದರೆ ಬಂಡವಾಳಶಾಹಿ ದೇಶಗಳ ಮುಖ್ಯವಾಗಿ ಅಮೇರಿಕದ ಆರ್ಥಿಕತೆ ಸಂಪೂರ್ಣ ಕುಸಿದು ಬೀಳುತ್ತದೆ. ಕಾರ್ಖಾನೆಗಳೆಲ್ಲ ಮುಚ್ಚಲ್ಪಟ್ಟು. ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತದೆ. ಯುದ್ಧದ ಆರ್ಥಿಕತೆಯೇ ಬಂಡವಾಳದಾರರ ಸಾಮ್ರಾಜ್ಯ ಶಾಹಿಗಳ ಮೂಲಾಧಾರ.

ಶಾಂತಿ ಸಮತಾವಾದಕ್ಕೆ ಅದರ ಬೆಳವಣಿಗೆಗೆ ಹಾಗೆಯೇ ಸಮತಾವಾದಕ್ಕಾಗಿ ನಡೆಸುವ ನಮ್ಮ ಚಳುವಳಿಗೆ ಸಹಾಯ ಮಾಡುತ್ತದೆ.

ಯುದ್ಧದಿಂದುಂಟಾಗ ಬಹುಧಾದ ಹಾನಿಯನ್ನು ಮನಗಂಡ ಧಾರ್ಮಿಕ ಗುಂಪುಗಳು, ಕೆಲವು ಪಾಶ್ಚಿಮಾತ್ಯ ದೇಶಗಳ ಸರಕಾರಗಳೂ ಯುದ್ಧವನ್ನು ವಿರೋಧಿಸುತ್ತಿವೆ. ನಾನಿರುವಾಗ ನೀವು ಯಾಕೆ ಹೆದುರುತ್ತೀರೆಂದು ಹೇಳಿ ಅಮೇರಿಕ ಕೆಲವು ದೇಶಗಳಿಗೆ ತಪ್ಪು ದಾರಿ ತೋರಿಸುತ್ತಿದೆ. ಮೆಕನಮಾರ, ಕೆನ್ನಡಿ, ನಿಕ್ಸನ್ ಮೊದಲಾದವರೂ ಯುದ್ಧ ವಿರೋಧಿಯಾಗಿದ್ದಾರೆ.

ಇದು ಬರೀ "ಶಾಂತಿ" ಹೋರಾಟವಲ್ಲ. ಯುದ್ಧವನ್ನು ವಿರೋಧಿಸುವ ಚೈತನ್ಯಪೂರ್ಣ ಹೋರಾಟ. ಕಾರ್ಮಿಕ ವರ್ಗದ ವಿಜಯಕ್ಕಾಗಿ, ಶೋಷಣೆ ಹಿತ ಸಮಾಜ ರಚನೆಗಾಗಿ ನಡೆಯುವ ಕ್ರಾಂತಿಕಾರಿ ಹೋರಾಟ ಇದಾಗಬೇಕು.

"ಕಾರ್ಮಿಕವರ್ಗ ಆಳುವ ವರ್ಗವಾದಾಗ ಮಾತ್ರ ಶಾಂತಿ ನೆಲೆಸಲು ಸಾಧ್ಯ"ವೆಂದು ಕಾರ್ಲ್ ಮಾರ್ಕ್ಸ್ ಹೇಳಿದ್ದರು.

ಬಂಡವಾಳ ಶಾಹಿಗಳ ಬಿಕ್ಕಟ್ಟು ಯಾವ ಮಟ್ಟದಲ್ಲಿದೆಯೆಂದರೆ, ಯುದ್ಧವಿಲ್ಲದೆ ಅದು ಪಾರಾಗಲು ಸಾಧ್ಯವಿಲ್ಲ. ಆದ್ದರಿಂದ ಕ್ರಾಂತಿರೂಪದ ಶಾಂತಿಗಾಗಿ ಯುದ್ಧ ವಿರೋಧಿ ಚಳುವಳಿಯನ್ನು ಬಲಗೊಳಿಸಿರಿ, ತೀವ್ರಗೊಳಿಸಿರಿ, ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ಪದ್ಧತಿ ಕುಸಿದು ಬೀಳುವಂತೆ ಮಾಡಿರಿ. ಸೆಪ್ಟೆಂಬರ್ ಒಂದರ ಯುದ್ಧ ವಿರೋಧಿ ಶಾಂತಿಗಾಗಿ ನಡೆಯುವ ಚಳುವಳಿ ಯಶಸ್ವಿಯಾಗಲಿ.

ಪರಿಸರ

* "ತಮ್ಮ ಜೀವಕ್ಕೆ ಅಪಾಯವಿದೆ" ಎಂದು ಶಂಕಿಸಿರುವುದಾಗಿ ದೆಹಲಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಪ್ರಕಾಶ್‌ಚಾಂದ್ ಅವರು ಇಂದು ಹೇಳಿದ್ದಾರೆ. ಸಂಸತ್ ಸದಸ್ಯ ಕೆ. ಲಕ್ಕಪ್ಪ ಅವರ ಪುತ್ರ ಭಾಗಿಯಾಗಿರುವ ಕೊಲೆಯೊಂದರ ಸಂಬಂಧದಲ್ಲಿ ಈ ಮ್ಯಾಜಿಸ್ಟ್ರೇಟರು ಆರೋಪಿ ಗುರುತಿಸುವ ಪರೇಡ್‌ನ ಮೇಲ್ವಿಚಾರಣೆಗಾಗಿ ಬುಧವಾರ ಇಲ್ಲಿಯ ತಿಹಾರ್ ಜೈಲಿಗೆ ಹೋಗುವಾಗ ವ್ಯಕ್ತಿಯೊಬ್ಬ ತಮ್ಮನ್ನು ಹಿಂಬಾಲಿಸುತ್ತಾ, "ಗುರುತಿನ ಚೀಟಿ"ಯನ್ನು ಬದಲಾಯಿಸುವಂತೆ ಸೂಚಿಸುವುದಲ್ಲದೆ, ಲಂಚದ ಆಮಿಷ ಮತ್ತು ಅಪಾಯದಿಂದ ಬೆದರಿಸಿದ್ದಾನೆ. ಎಂದು ಆರೋಪಿಸಿದ್ದಾರೆ.

— ಪ್ರಜಾವಾಣಿ ಆಗಸ್ಟ 13

* 1977–78ರ ಅಂಕಿ ಅಂಶಗಳ ಪ್ರಕಾರ ಉತ್ತರಪ್ರದೇಶ ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು (ಶೇಕಡಾ 51) ಜನ ದಾರಿದ್ರ್ಯ ರೇಖೆಯ ಕೆಳಗೆ ವಾಸಿಸುತ್ತಿದ್ದಾರೆ. ದೇಶದ ಒಟ್ಟಾರೆ ಶೇಕಡಾವಾರು ಶೇಕಡಾ 48

.... ಸ್ಟೇಟ್ಸ್‌ಮನ್

* ಅಮೇರಿಕದ ಜನಸಂಖ್ಯಾ ಬ್ಯೂರೋದ ಅಂಕಿಸಂಖ್ಯೆಗಳ ಪ್ರಕಾರ ಅಧಿಕೃತವಾಗಿ ಘೋಷಿಸಿರುವ ದಾರಿದ್ರ್ಯ ರೇಖೆಯ ಕೆಳಗೆ ಜೀವಿಸಿರುವವರ ಜನಸಂಖ್ಯೆ 34.4 ಮಿಲಿಯಕ್ಕೆ ಏರಿದೆ (ಇದು ದೇಶದ ಜನಸಂಖ್ಯೆಯ ಶೇಕಡಾ 15) ಪಿ. ಟಿ. ಐ.

* ನಿರುದ್ಯೋಗ (ಶೇಕಡಾ 9.5), ಬಡತನದ ಹೆಚ್ಚಳ ಮತ್ತು ಸಾಮಾಜಿಕ ಕಲ್ಯಾಣ ಯೋಜನೆಗಳ ಕಡಿತದಿಂದ ಹಸಿವು, ಹೆಚ್ಚಿರುವ ಬಡ್ಡಿದರ, ವಿದೇಶಿಯರ ಜತೆ ಪೈಪೋಟಿ ಮಾಡಲಾಗದಿರುವ ಅಸಹಾಯಕತೆ–ಇವುಗಳಿಂದ ದೂರಪೂರ್ವದ ವಿಶಿಯನ್ನರ ಮೇಲೆ ಅಮೇರಿಕನ್‌ರು ಹಲ್ಲೆ ನಡೆಸಿರುವ ಹಲವು ವರದಿಗಳು ಬರುತ್ತಿವೆ.

ಪಿ. ಟಿ. ಐ. ಆ 14

ವಿಧಾನ ಸಭೆಯಲ್ಲಿ

ಶಾಸಕ ಪಿ. ರಾಮಚಂದ್ರರಾವ್ ಇವರು ಬಾಲ ಕಾರ್ಮಿಕರ ಕುರಿತು ಕೇಳಿದ ಪ್ರಶ್ನೆ ಮತ್ತು ಅದಕ್ಕೆ ಮಂತ್ರಿಯವರ ಉತ್ತರ

ಪ್ರಶ್ನೆ :

ಅ) ನಮ್ಮ ರಾಜ್ಯದಲ್ಲಿ ಬಾಲ ಕಾರ್ಮಿಕರು ವಿಪುಲವಾಗಿರುವದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇವರು ಯಾವ ಯಾವ ಕೈಕಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಅವರ ಸಂಖ್ಯೆ ಎಷ್ಟು ?

ಇ) ಇದನ್ನು ಸಂಪೂರ್ಣವಾಗಿ ನಿಲ್ಲಿಸಲು ಈಗಾಗಲೇ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಈ) ಇವರ ಆಹಾರ, ಆರೋಗ್ಯ ಮತ್ತು ವಿದ್ಯಾಭ್ಯಾಸಗಳಿಗಾಗಿ ಮಾಲಿಕರು ಜವಾಬ್ದಾರಿ ವಹಿಸುವಂತೆ ಸರಕಾರದವರು ಕೈಗೊಂಡ ಕ್ರಮಗಳೇನು. ಮತ್ತು ಸರ್ಕಾರದವರು ಕಾರ್ಮಿಕರ ಕಲ್ಯಾಣಕ್ಕಾಗಿ ಎಷ್ಟು ಹಣ ವೆಚ್ಚ ಮಾಡಿದ್ದಾರೆ ?

ಮಂತ್ರಿಯು ಖಾತೆ : ಕಾರ್ಮಿಕ ಮತ್ತು ವಕ್ಫ್ (ಶ್ರೀ ಅಜೀಜ್‌ಸೇಟ್

ಉತ್ತರಗಳು :

ಅ) ಹೌದು.

ಆ) ಶ್ರಮಿಕ ಮಕ್ಕಳ ಅಂಕಿ–ಅಂಶಗಳು ಲಭ್ಯವಿಲ್ಲ. ಆದರೆ, ತಪಾಸಣೆ ಸಮಯದಲ್ಲಿ ವಿವಿಧ ಉದ್ಯೋಗಗಳಲ್ಲಿ ಮಕ್ಕಳು ಕೆಲಸ ಮಾಡುತ್ತಿರುವುದು ಗಮನಕ್ಕೆ ಬರುತ್ತದೆ.

ಇ) ಕಾರ್ಮಿಕ ಇಲಾಖೆಯ ಬಾಲ ಕಾರ್ಮಿಕರ ವಿಭಾಗದ, ಕಾರ್ಮಿಕ ಅಧಿಕಾರಿ ಮತ್ತು ಇತರೆ ಕಾರ್ಮಿಕ ನಿರೀಕ್ಷಕರೊಂದಿಗೆ ವಿವಿಧ ಕಾರ್ಮಿಕ ಕಾನೂನುಗಳ ಉಪಬಂಧಗಳನ್ನು ಜಾರಿಗೊಳಿಸುತ್ತಿದ್ದಾರೆ.

ಈ) ಈ ಕಾರ್ಯಕ್ರಮಗಳು ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಪ್ರಶ್ನೆ : ಅ) ಈ ಕೆಳಗಿನ ಕೈಗಾರಿಕೆಗಳಲ್ಲಿ ಈಗ ಜಾರಿಯಲ್ಲಿರುವ ಕನಿಷ್ಟ ಕೂಲಿ ಎಷ್ಟು ? 1. ಸಾರಿಗೆಉದ್ಯಮ 2) ಫ್ಲೈವುಡ್ ಉದ್ಯಮ 3) ಇಂಜನಿಯರಿಂಗ್ ಕೈಗಾರಿಕೆಗಳು 4) ರೇಷ್ಮೆ ಕೈಗಾರಿಕೆಗಳು 5) ಚರ್ಮ ಹದ ಮಾಡುವುದು 6) ಕೃಷಿ ಕೂಲಿಗಾರರು 7) ನೇಕಾರಿಕೆ ಉದ್ಯಮ (ಕೈಮಗ್ಗಗಳು, ಯಂತ್ರಚಾಲಿತಮಗ್ಗಗಳು) 8) ಅಕ್ಕಿ, ಬತ್ತ, ಎಣ್ಣೆ ಗಿರಣಿಗಳು ಮತ್ತು ಪಶುಮೇವು ತಯಾರಕರು ಈ ದರಗಳು ಎಷ್ಟು ವರ್ಷಗಳಿಂದ ಜಾರಿಯಲ್ಲಿವೆ ?

ಆ) ಇದನ್ನು ಪುನರ್ವಿಮರ್ಶೆ ಮಾಡುವ ಯೋಜನೆ ಸರ್ಕಾರದವರಿಗೆ ಇವೆಯೇ ?

ಉತ್ತರಗಳು :

ಅ) ಕ್ರಮಸಂಖ್ಯೆ 1ರಿಂದ 5ರ ವರೆಗಿನ ಕೈಗಾರಿಕೆಗಳಲ್ಲಿ ಈಗಿನ ಕನಿಷ್ಟ ಕೂಲಿಯು ತಿಂಗಳಿಗೆ ರೂ. 209 ರಿಂದ ರೂ. 371ರವರೆಗಿದೆ. ಕೃಷಿ ಉದ್ಯಮದಲ್ಲಿ ದಿನಕ್ಕೆ ರೂ. 4.12 ರಿಂದ ರೂ. 6.55ರವರೆಗಿದೆ.

ಕ್ರಮಸಂಖ್ಯೆ 6 ಮತ್ತು 7ರಲ್ಲಿರುವ ಎಣ್ಣೆ ಮತ್ತು ಗಿರಣಿ ಕೈಗಾರಿಕೆಗಳಿಗೆ ಸರ್ಕಾರವು ಪ್ರಕಟಿಸಿದ ಕನಿಷ್ಟ ವೇತನ ಪ್ರಕಟಣೆಗಳನ್ನು ಕೆಲವು ಉದ್ದಿಮೆದಾರರು ಪ್ರಶ್ನಿಸಿದ್ದರಿಂದ, ರಾಜ್ಯ ಉಚ್ಚ ನ್ಯಾಯಾಲಯವು ಅವುಗಳ ಮೇಲೆ ತಡೆಯಾಜ್ಞೆಯನ್ನು ನೀಡಿತು. ಆದ್ದರಿಂದ ಸದ್ಯದಲ್ಲಿ ಅವು ಅಸ್ತಿತ್ವದಲ್ಲಿಲ್ಲ. ಈ ದರಗಳು 1982ರಿಂದ ಜಾರಿಯಲ್ಲಿದೆ.

ಆ) ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಶಾಸಕ ಕಾ|| ಎಸ್. ಸೂರ್ಯನಾರಾಯಣರಾವ್ ಅವರು ಕೇಳಿದ ಪ್ರಶ್ನೆ ಮತ್ತು ಮಂತ್ರಿಯವರ ಉತ್ತರ

ಪ್ರಶ್ನೆ :

ಭದ್ರಾವತಿ ಕಬ್ಬಿಣ ಕಾರ್ಖಾನೆ 1982–83 ನೇ ಸಾಲಿನಲ್ಲಿ ಎಷ್ಟು ಲಾಭ ಗಳಿಸಿದೆ ?

ಉ : ಲಾಭ ಗಳಿಸಿಲ್ಲ.

ಪ್ರ : ಅಲ್ಲಿಯ ಕಾರ್ಮಿಕರ ಮತ್ತು ಕಂಟ್ರಾಕ್ಟ್ ಕಾರ್ಮಿಕರ ಸಂಖ್ಯೆ ಎಷ್ಟು?

ಉ ; ಕಾರ್ಮಿಕ ವರ್ಗ 10,884
ಅಧಿಕಾರ ವರ್ಗ 662

ವಿ. ಐ. ಎಸ್. ಎಲ್. ನವರು ಕಂಟ್ರಾಕ್ಟ್ ಕಾರ್ಮಿಕರುಗಳನ್ನು ನೇಮಿಸಿಕೊಂಡಿಲ್ಲ.

ಪ್ರ : ಈ ಕಂಟ್ರಾಕ್ಟ್ ಕಾರ್ಮಿಕರನ್ನು ಖಾಯಂ ಮಾಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಉ : ಮೇಲೆ ಹೇಳಿದ 2 ನೇ ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಶ್ನೆ

ಅ) ಕನಿಷ್ಟ ಕೂಲಿ ಜಾರಿ ಮಾಡುವುದರ ಬಗ್ಗೆ ಹೈಕೋರ್ಟ್ ತಡೆಯಾಜ್ಞೆ ಇರುವುದು ನಿಜವೆ?

ಆ) ಈ ತಡೆಯಾಜ್ಞೆಯನ್ನು ತೆರವು ಮಾಡಿಸಲು ಸರಕಾರದವರು ಕೈಗೊಂಡಿರುವ ಕ್ರಮವೇನು?

ಇ) ವಿವಿಧ ಕಾರ್ಮಿಕರ ಕನಿಷ್ಟ ಕೂಲಿ ನಿಗದಿ ಪಡಿಸಲುಕನಿಷ್ಟ ಕೂಲಿ ಸಲಹಾ ಮಂಡಲಿ ರಚನೆ ಮಾಡುವ ಉದ್ದೇಶ ಸರಕಾರದವರಿಗೆ ಇದೆಯೇ. ಈ ಬಗ್ಗೆ ಈಗಾಗಲೆ ಕ್ರಮವನ್ನೇನಾದರೂ ಕೈಗೊಳ್ಳಲಾಗಿದೆಯೇ?

ಉತ್ತರಗಳು

ಅ) ಹೌದು.

ಆ) ಇದರ ಬಗ್ಗೆ, ಏಕಪೀಠ ನ್ಯಾಯಾದೀಶರ ತೀರ್ಪಿನ ವಿರುದ್ಧ ವಿಭಾಗೀಯ ಪೀಠಕ್ಕೆ ಅಪೀಲು ಮಾಡಿದೆ. ಕನಿಷ್ಟ ವೇತನ ಸಲಹಾ ಮಂಡಳಿ ರಚಿಸುವ ವಿಚಾರವು ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ಪ್ರಶ್ನೆ :

ಅ) ಬೆಂಗಳೂರು ನಗರದಲ್ಲಿ ಎಷ್ಟು ಉಡುಪು ತಯಾರಿಕೆಯ ಕಾರ್ಖಾನೆಗಳಿವೆ ?

ಆ) ಅವುಗಳಲ್ಲಿ ಎಷ್ಟು ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳನ್ನು ಅನ್ವಯಿಸಲಾಗಿದೆ ?

ಇ) ಎಲ್ಲಾ ಕಾರ್ಖಾನೆಗಳಿಗಿದ್ದ ಕಾರ್ಮಿಕ ಕಾನೂನುಗಳನ್ನು ಅನ್ವಯಿಸಲು ಸರಕಾರದವರು ಕೈಗೊಂಡ ಕ್ರಮಗಳೇನು ?

ಈ) ಈ ಉದ್ಯಮದಲ್ಲಿ ನಿರತರಾಗಿರುವ ಮಹಿಳಾ ಕಾರ್ಮಿಕರ ಸಂಖ್ಯೆ ಎಷ್ಟು ?

ಮಂತ್ರಿಯು ಖಾತೆ : ಕಾರ್ಮಿಕ ಮತ್ತು ವಕ್ಫ್ (ಶ್ರೀ ಅಜೀಜ್‌ಸೇಟ್)

ಉತ್ತರಗಳು :

ಅ) ಒಟ್ಟು 88 ನೊಂದಾಯಿಸಲ್ಪಟ್ಟ ಕಾರ್ಖಾನೆಗಳಿವೆ.

ಆ) ನೊಂದಾಯಿಸಲ್ಪಟ್ಟ ಎಲ್ಲಾ ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳನ್ನು ಅನ್ವಯಿಸಲಾಗಿದೆ.

ಇ) ಕಾರ್ಖಾನೆಯ ಪರಿವೀಕ್ಷಕರು ನೊಂದಾಯಿಸಲ್ಪಟ್ಟಿರುವ ಕಾರ್ಖಾನೆಗಳನ್ನು ಪರಿವೀಕ್ಷಿಸಿ, ಈ ಕಾರ್ಖಾನೆಗಳಲ್ಲಿ ಕಂಡು ಬಂದ ಕಾನೂನು ಉಲ್ಲಂಘನೆಗಳ ಉದ್ದಿಮೆದಾರ ಬಗೆರಿಗೆ ಪತ್ರ ಬರೆದು ತಪ್ಪುಗಳನ್ನು ಸರಿಪಡಿಸಲು ಸಲಹೆ ನೀಡಿರುತ್ತಾರೆ. ಸಲಹೆ ನೀಡಿದ ನಂತರವೂ, ಕಾನ ‍ನು ಪರಿಪಾಲನೆಯಲ್ಲಿ ಉದ್ದಿಮೆದಾರರು ಆಸಕ್ತಿ ತೋರಿಸದಿರುವ ಸಂದರ್ಭದಲ್ಲಿ ಅಂತಹ ಉದ್ದಿಮೆದಾರರ ಮೇಲೆ ಕಾನೂನು ರೀತ್ಯ ಕ್ರಮವನ್ನು ಕೈಗೊಳ್ಳಲಾಗಿದೆ.

ಈ) ನೊಂದಾಯಿಸಲ್ಪಟ್ಟಿರುವ ನಿರತರಾಗಿರುವ ಮಹಿಳಾ ಕಾರ್ಮಿಕರ ಸಂಖ್ಯೆ 88 ಕಾರ್ಖಾನೆಗಳಲ್ಲಿ ಒಟ್ಟು 5344.

ಓದುಗರ ಗಮನಕ್ಕೆ

ಕಳೆದ ಸಂಚಿಕೆಯ 3 ನೇ ಪುಟದಲ್ಲಿ ಪ್ರಕಟವಾಗಿದ್ದ "ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳ ಪಾತ್ರ ಮತ್ತು ಇಂದಿನ ಕರ್ತವ್ಯಗಳು' ಲೇಖನದ ಮುಂದುವರಿಕೆಯನ್ನು ಅನುವಾದದಲ್ಲಿ ಉಂಟಾದ ವಿಳಂಬದಿಂದಾಗಿ ಈ ಸಲ ಪ್ರಕಟಿಸಲಾಗಲಿಲ್ಲ. ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Printed & Published by P. Ramachandra Rao by him on behalf of the Communist Party of India (Marxist) Karnataka State Committee V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRARAO